MAA ಫ್ರೆಂಡ್ಸ್ ಸಾರಥ್ಯದಲ್ಲಿ...

# ಯುವ ಮಾರ್ಗ

YUVA MARGA NEWS PAPER
VOICE OF THE NATION

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್
Cell : 9743497111

YUVA MARGA KANNADA DAILY NEWS PAPER

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ
Cell : 9743496111

ಸಂಪುಟ: 04 | ಸಂಚಿಕೆ: 297 | ಶುಕ್ರವಾರ : 12-09-2025 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00

VOLUME: 04 | ISSUE: 297 | FRIDAY : 12-09-2025 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

## ರಾಯಚೂರು ಸಿಟಿ, ಗ್ರಾಮೀಣ ಪ್ರದೇಶದಲ್ಲಿ ಹಠಾತ್ ದಾಳಿ: ಕೆಲ ಆಸ್ಪತ್ರೆಗಳಿಗೆ ಬೀಗ

ಯುವ ಮಾರ್ಗ ಸುದ್ದಿ

**ರಾಯಚೂರು,ಸೆ.11–**ಜಿಲ್ಲಾಧಿಕಾರಿಗಳ ನಿರ್ದೇಶನದ ಮೇರೆಗೆ ಜಿಲ್ಲಾಡಳಿತ ರಾಯಚೂರು ಮತ್ತು ಆರೋಗ್ಯ ಇಲಾಖೆಯಿಂದ ಸೆ.10ರಂದು ನಡೆದ ಜಂಟಿ ಕಾರ್ಯಚರಣೆಯಲ್ಲಿ ಕೆಲ ಆಸ್ಪತ್ರೆಗಳನ್ನು ಸೀಜ್ ಮಾಡಲಾಗಿದೆ.

ರಾಯಚೂರ ನಗರ ಮತ್ತು ರಾಯಚೂರು ಗ್ರಾಮಾಂತರದಲ್ಲಿ ಕೆಪಿಎಂಇ ನೋಂದಣಿ ಇಲ್ಲದಿರುವ ಹಾಗೂ ನಕಲಿ ವೈದ್ಯರ ವಿರುದ್ಧ ದಾಳಿ ಮಾಡಲಾಯಿತು.

ಸಹಾಯಕ ಆಯುಕ್ತರ ನೇತೃತ್ವದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿಗಳು, ಜಿಲ್ಲಾ ಆಯುಷ್ ಅಧಿಕಾರಿಗಳು ಮತ್ತು ಭಾರತೀಯ ವೈದ್ಯಕೀಯ ಸಂಘದ

ಸದಸ್ಯ ಕಾರ್ಯದರ್ಶಿ ಅವರನ್ನೊಳಗೊಂಡ ಒಂದು ತಂಡವು ರಾಯಚೂರು



ನಗರದ ಅಗವಾರಲ್ ಪಾಲಿಕ್ಲಿನಿಕ್ ರಾಯಚೂರು, ಸನ್ನಿಧಿ ಕ್ಲಿನಿಕ್ ರಾಯಚೂರು, ಮಾಣಿಕರಾವ್ ಕ್ಲಿನಿಕ್ ರಾಯಚೂರು, ಅಲ್ ಸಲಾಮ್ ಕ್ಲೀನಿಕ್, ಸೇವಾ ಕ್ಲಿನಿಕ್ ರಾಯಚೂರು ಮತ್ತು ಅಜಮ್ ಕ್ಲೀನಿಕ್ ಗೆ ಭೇಟಿ ನೀಡಿ ಕಾಯ್ದೆಯಡಿಯಲ್ಲಿ ಸೀಜ್ ಮಾಡಿದರು. ಮತ್ತು ಈ ಕ್ಲಿನಿಕ್ ಗಳಿಗೆ ನಿಯಮದಡಿ ದಂಡವಿಧಿಸುವ ಎಚ್ಚರಿಕೆ ನೀಡಿದರು.

ನ್ಯೂ ಲೈಫ್ ಲೈನ್ ಆಸ್ಪತ್ರೆ ರಾಯಚೂರು, ನಬಿ.ಕುಮಾರ್ ರಾಯಚೂರು, ಫಾರ್ಚುನ್ ಆಸ್ಪತ್ರೆ ರಾಯಚೂರು, ಗಾರಲದಿನ್ನಿ ಕ್ಲಿನಿಕ್ ರಾಯಚೂರು, ಜನತಾ ಆಸ್ಪತ್ರೆ ರಾಯಚೂರು ಈ ಆಸ್ಪತ್ರೆಗಳಿಗೆ ಭೇಟಿ ನೀಡಿ ಕೆಪಿಎಂಇ ಕಾಯ್ದೆ ಅಡಿಯಲ್ಲಿ ನೋಂದಣಿ ಆಗಿರುವ ಬಗ್ಗೆ ಪರಿಶೀಲಿಸಿದರು.**(2ನೇಪುಟಕ್ಕೆ)**

## ನಾಲ್ವರು ನೂತನ ಪರಿಷತ್ ಸದಸ್ಯರ ಪ್ರಮಾಣ ವಚನ

**ಬೆಂಗಳೂರು,ಸೆ.11–**ವಿಧಾನ ಪರಿಷತ್‌ಗೆ ನಾಮಕರಣಗೊಂಡಿರುವ ನಾಲ್ವರು ಪರಿಷತ್ ಸದಸ್ಯರಾಗಿ ಇಂದು ಪ್ರಮಾಣ ವಚನ ಸ್ವೀಕರಿಸಿದರು. ವಿಧಾನ ಪರಿಷತ್‌ನಲ್ಲಿ ಖಾಲಿ ಇದ್ದ ನಾಲ್ಕು ನಾಮನಿರ್ದೇಶನ ಸ್ಥಾನಗಳಿಗೆ ರಾಜ್ಯ ಸರ್ಕಾರ ಕಳೆದವಾರ ಕೆಪಿಸಿಸಿಯ ಮಾಧ್ಯಮ ಘಟಕದ ಅಧ್ಯಕ್ಷ ರಮೇಶ್‌ಬಾಬು, ಎನ್‌ಆರ್‌ಐ ವಿಭಾಗದ ಮುಖ್ಯಸ್ಥೆ ಆರತಿಕೃಷ್ಣ, ದಲಿತ ಮುಖಂಡರಾದ ಹುಬ್ಬಳ್ಳಿ–ಧಾರವಾಡದ ಜಕ್ಕಪ್ಪನವರ್, ಮೈಸೂರು ಮೂಲದ ಪತ್ರಕರ್ತ ಶಿವಕುಮಾರ್.ಕೆ ಅವರನ್ನು ನೇಮಕ ಮಾಡಿತ್ತು.

ವಿಧಾನ ಪರಿಷತ್‌ಗೆ ನಾಮಕರಣಗೊಂಡ ರಮೇಶ್ ಬಾಬು, ಆರತಿ ಕೃಷ್ಣ, ಜಕ್ಕಪ್ಪನವರ್ ಮತ್ತು ಶಿವಕುಮಾರ್ ಅವರು ಇಂದು ವಿಧಾನ ಸೌಧದ ಬ್ಯಾಂಕ್ವೆಟ್



ಹಾಲ್‌ನಲ್ಲಿ ನಡೆದ ಸಮಾರಂಭದಲ್ಲಿ ವಿಧಾನ ಪರಿಷತ್ ಸದಸ್ಯರಾಗಿ ಪ್ರಮಾಣವಚನ ಸ್ವೀಕರಿಸಿದರು.

ಈ ಸಂದರ್ಭದಲ್ಲಿ ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್, ಸಚಿವರುಗಳಾದ ಡಾ. ಜಿ. ಪರಮೇಶ್ವರ್, ಎಚ್.ಕೆ ಪಾಟೀಲ್, ಕೆ. ವೆಂಕಟೇಶ್, ಬೋಸರಾಜು, ಜಮೀರ್ ಅಹ್ಮದ್‌ಖಾನ್ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

## ಪ್ರಚೋದನಕಾರಿ ಭಾಷಣ ಸಿ.ಟಿ ರವಿ ವಿರುದ್ಧ ಎಫ್‌ಐಆರ್

**ಬೆಂಗಳೂರು,ಸೆ.11–**ಮದ್ದೂರಿನಲ್ಲಿ ನಿನ್ನೆ ನಡೆದ ಸಾಮೂಹಿಕ ಗಣೇಶವಿಸರ್ಜನೆ ಕಾರ್ಯಕ್ರಮದಲ್ಲಿ ಪ್ರಚೋದನಕಾರಿ ಭಾಷಣ ಮಾಡಿದ ಆರೋಪದ ಮೇಲೆ ಮಾಜಿ ಸಚಿವ ಬಿಜೆಪಿಯ ವಿಧಾನ ಪರಿಷತ್ ಸದಸ್ಯ ಸಿ.ಟಿ ರವಿ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಮದ್ದೂರಿನಲ್ಲಿ ನಿನ್ನೆ ನಡೆದ ಸಾಮೂಹಿಕ ವಿಸರ್ಜನಾ ಕಾರ್ಯಕ್ರಮದ ವೇದಿಕೆಯಲ್ಲಿ ಸಿಟಿ ರವಿ ಪ್ರಚೋದನಕಾರಿ ಭಾಷಣ ಮಾಡಿದ್ದಾರೆ ಎಂದು ಪೊಲೀಸರು ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿದ್ದಾರೆ.

ಈ ಸಂಬಂಧ ಮದ್ದೂರು ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಮಂಜುನಾಥ್ ನೀಡಿದ ದೂರಿನನ್ವಯ ಸಿಟಿ ರವಿ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಅನ್ಯ ಸಮುದಾಯಗಳ ಮಧ್ಯೆ ದ್ವೇಷ ಉಂಟು ಮಾಡುವ ಮತ್ತು ಸೌಹಾರ್ದತಾ ಭಾವನೆಗಳಿಗೆ ಭಾದಕವಾಗುವಂತೆ ವೈರತ್ವ, ದ್ವೇಷ ಉಂಟಾಗುವಂತೆ ಪ್ರಚೋದನಕಾರಿ ಭಾಷಣ ಮಾಡಿದ ಆರೋಪದಡಿ ಪ್ರಕರಣ ದಾಖಲಾಗಿದೆ.

ಮದ್ದೂರಿನಲ್ಲಿ ಸಿಟಿ ರವಿ ನಿನ್ನೆ ಅವರು



ಶೇ. ಇದ್ದಾಗಲೇ ಬಾಲ ಬಿಚ್ಚುತ್ತಿದ್ದಾರೆ. ಇನ್ನೂ ಶೇ.50 ಆದರೆ ನಮ್ಮ ಮಕ್ಕಳು ಮೊಮ್ಮಕ್ಕಳು ಬದುಕುವುದಕ್ಕೆ ಆಗುತ್ತಾ. ಕೆಲವು ಕುತ ್ಂತ್ರಿಗಳು ವೋಟಿನ ಆಸೆಗಾಗಿ ಹಿಂದೂ ಸಮಾಜವನ್ನು ಒಡೆಯುತ್ತಾರ.ಎ ಮುಸಲ್ಮಾನರು ಪಾಕಿಸ್ತಾನ ಜಿಂದಾಬಾದ್ ಎಂದರೂ ಎಸ್ ಎಸ್ ಎನ್ನುತ್ತಾರೆ.

ಮುಸಲ್ಮಾನರು ರಾಮಮಂದಿರದಲ್ಲಿ ಪೆಟ್ರೋಲ್ ಬಾಂಬ್ ಹಾಕಿದಾಗಲೇ ಇವರಿಗೆ ಬುದ್ಧಿ ಕಲಿಸಬೇಕಿತ್ತು. ಬುದ್ಧಿ ಕಲಿಸಿದ್ದರೆ ಈ ರೀತಿ ಆಗುತ್ತಿರಲಿಲ್ಲ. ನೀವು ಹೊರಗಡೆಯಿಂದ ಬಂದವರು.

ನಾವು ಇಲ್ಲೇ ಇರುವವರು ತೊಡೆ ತಟ್ಟೋ ಕೆಲಸ ಮಾಡಬೇಡಿ. ತೊಡೆ ಮುರಿತ್ತೀವಿ ತಲೆಯೂ ತೆಗೆತ್ತೀವಿ ಕಲ್ಲು ಹೊಡೆಯುವವರನ್ನು ಕಲ್ಲಿನ ಒಳಗಡೆ ಸಮಾಧಿ**(2ನೇಪುಟಕ್ಕೆ)**

## ಜಿಲ್ಲಾ ಪಂಚಾಯತ್ ಉಪಾ ಕಾರ್ಯದರ್ಶಿಗಳಿಂದ ತಾಲೂಕಿನ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನೆ

ಯುವ ಮಾರ್ಗ ಸುದ್ದಿ

**ಮಾನ್ವಿ,ಸೆ.11–**ಪಟ್ಟಣದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ನಡೆದ ತಾಲೂಕಿನ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನೆ ಸಭೆಯಲ್ಲಿ ಜಿಲ್ಲಾ ಪಂಚಾಯತ್ ಉಪಾ ಕಾರ್ಯದರ್ಶಿಗಳು ಹಾಗೂ ಮಾನ್ವಿ ತಾಲೂಕು ಪಂಚಾಯಿತಿ ಆಡಳಿತಾಧಿಕಾರಿಗಳಾದ ಹಾಲ್ ಸಿದ್ದಪ್ಪ ಪೂಜಾರ್ ಮಾತನಾಡಿ, ಮಳೆ ಗಾಲ ಇರುವುದರಿಂದ ಸೊಳ್ಳೆಗಳಿಂದ ಹರಡುವ ಮಲೇರಿಯಾ ಮತ್ತು ಡೆಂಗ್ಯೂ ಪ್ರಕರಣಗಳು ಹೆಚ್ಚಾಗಿದ್ದು ತಾಲೂಕಿನ ಎಲ್ಲಾ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಲ್ಲಿ ಗ್ರಾಮಭಿವೃದ್ಧಿ ಅಧಿಕಾರಿಗಳು ನೀರು ನಿಲ್ಲುವ ಗುಂಡಿಗಳನ್ನು ಮುಚ್ಚಬೇಕು ಹಾಗೂ ಚರಂಡಿಗಳಲ್ಲಿ ನೀರು ಹರಿಯುವಂತೆ ನೋಡಿಕೊಳ್ಳಿ ಹಾಗೂ ನೀರು ನಿಲ್ಲುವ ಕಡೆ ಕೀಟನಾಶಕವನ್ನು ಸಿಂಪರನೇ ಮಾಡಬೇಕು ತಿಂಗಳಿಗೆ ಕನಿಷ್ಟ ನಾಲ್ಕು ಬಾರಿ ಫಾಗೀಂಗ್ ಮಾಡಬೇಕು. ಗ್ರಾಮದಲ್ಲಿ ಸ್ವಚ್ಚತೆಗೆ ಹೆಚ್ಚಿನ ಅದ್ಯತೆ ನೀಡಬೇಕು ಹಾಗೂ ಕುಡಿಯುವ ನೀರಿನ ಟ್ಯಾಂಕ್ ಗಳನ್ನು ಸ್ವಚ್ಚವಾಗಿರಿಸಬೇಕು ಗ್ರಾಮ ಪಂಚಾಯಿತಿಗಳಲ್ಲಿ ಜನರು ಸಲ್ಲಿಸುವ ಅರ್ಜಿಗಳನ್ನು ಸೂಕ್ತವಾಗಿ ವಿಲೇವಾರಿ ಮಾಡುವುದಕ್ಕೆ ಕ್ರಮ ಕೈಗೊಳ್ಳಬೇಕು ಇಲ್ಲವೇ ಸೂಕ್ತವಾದ ಹಿಂಬರಹ



ವನ್ನು ನೀಡಬೇಕು. ಗ್ರಾಮೀಣ ಕುಡಿಯುವ ನೀರು ಹಾಗೂ ನೈರ್ಮಾಲ್ಯ ಇಲಾಖೆಯಿಂದ ಗ್ರಾಮೀಣ ಭಾಗದಲ್ಲಿ ಜೆ.ಜೆ.ಎಂ. ಕಾಮಗಾರಿಯನ್ನು ಪೂರ್ಣಗೊಳಿಸಿ ನೀರಿನ ಸಂಪರ್ಕವನ್ನು ಕಲ್ಪಿಸಿ ಗ್ರಾಮ ಪಂಚಾಯಿತಿಗೆ ಹಸ್ತಾಂತರಿಸಬೇಕು, ಶುದ್ದ ಕುಡಿಯುವ ನೀರಿನ ಘಟಕಗಳನ್ನು ದುರಸ್ತಿ ಮಾಡಿಸಿ ಜನರಿಗೆ ಶುದ್ದವಾದ ಕುಡಿಯುವ ನೀರು ದೊರೆಯುವಂತೆ ಕ್ರಮ ಕೈಗೊಳ್ಳಬೇಕು ಎಂದು ಗ್ರಾಮೀಣ ಕುಡಿಯುವ ನೀರು ಹಾಗೂ ನೈರ್ಮಾಲ್ಯ ಇಲಾಖೆಯ ಅಧಿಕಾರಿ ಸತೀಷ ರವರಿಗೆ ಸೂಚಿಸಿದರು. ತಾಲೂಕಿನಲ್ಲಿ ಡೆಂಗ್ಯೂ ಪರಿಕ್ಷೇಗಳನ್ನು ಹೆಚ್ಚುಮಾಡುವ ಮೂಲಕ ಡೆಂಗ್ಯೂ ರೋಗಿಗಳನ್ನು ಪತ್ತೆ ಹಚ್ಚಿ ಚಿಕಿತ್ಸೆ ನೀಡಿ ಹಾಗೂ ಜನರಲ್ಲಿ ಜಾಗೃತಿ ಮೂಡಿಸಿ ತಾಲೂಕಿನಲ್ಲಿರುವ 9 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಹೆಚ್ಚು ವೈದ್ಯರನ್ನು ನೇಮಕಮಾಡಿಕೊಳ್ಳಿ, ಭ್ರೂಣ ಹತ್ಯ ನಡೆಯುತ್ತಿರುವ ಬಗ್ಗೆ ಹೆಚ್ಚಿನ ಪ್ರಕರಣಗಳು ಪತ್ತೆಯಾಗುತ್ತಿರುವುದರಿಂದ ಖಾಸಗಿ ಆಸ್ಪತ್ರೆಗಳಲ್ಲಿನ ಸ್ಕ್ಯಾನಿಂಗ್ ಸೆಂಟರ್‌ಗಳ ಮೇಲೆ ನಿಗಾವಹಿಸಿ. ಪಟ್ಟಣದ ತಾಯಿ ಮಕ್ಕಳ ಆಸ್ಪತ್ರೆಯಲ್ಲಿ ಗರ್ಭಿಣಿ ಮಹಿಳೆಯರಿಗೆ ಉತ್ತಮವಾಗಿ ಅರೈಕೆ ಮಾಡಿ ಸಿಸರೀನ್ ಹೆರಿಗೆ ಮಾಡುವುದಕ್ಕೆ ಅಗತ್ಯ ಸಿದ್ದತೆ ಮಾಡಿಕೊಳ್ಳಿ,ಹಾಗೂ ಸಹಜ ಹೆರಿಗೆಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ತಾ. ಆರೋಗ್ಯ ಶಿಕ್ಷಣಾಧಿಕಾರಿ ಬಾಬು ಚಿನ್ನರವರಿಗೆ ಸೂಚಿಸಿದರು.

ತಾಲೂಕಿನಲ್ಲಿರುವ ಪ.ಜಾತಿ ,ಪ.ಪಂಗಡ,ಓ.ಬಿ.ಸಿ. ಅಲ್ಪಸಂಖ್ಯಾತರ ಮೂರಾರ್ಜಿ ಶಾಲೆಗಳಲ್ಲಿ ರಾತ್ರಿ ವೇಳೆ ವಸತಿ ನಿಲಯದ ವಿದ್ಯಾರ್ಥಿಗಳನ್ನು**(2ನೇಪುಟಕ್ಕೆ)**

## ಇತಿಹಾಸ ಉಪನ್ಯಾಸಕ ಅಮರೇಶಸ್ವಾಮಿಗೆ ಜಿಲ್ಲಾ ಆದರ್ಶ ಶಿಕ್ಷಕ ಪ್ರಶಸ್ತಿ

ಯುವ ಮಾರ್ಗ ಸುದ್ದಿ

**ಲಿಂಗಸುಗೂರು,ಸೆ.11–**ರಾಯಚೂರು ಜಿಲ್ಲೆಯ ವಿವಿಧ ಖಾಸಗಿ ಶಾಲಾ, ಕಾಲೇಜಗಳ ಆಡಳಿತ ಮಂಡಳಿಗಳ ಒಕ್ಕೂಟದ ವತಿಯಿಂದ ಕೊಡಮಾಡುವ 2025–26 ನೇ ಸಾಲಿನ ಜಿಲ್ಲಾ ಆದರ್ಶ ಶಿಕ್ಷಕ ಪ್ರಶಸ್ತಿಗೆ ಲಿಂಗಸುಗೂರ ಪಟ್ಟಣದ ಶ್ರೀ ಉಮಾ ಮಹೇಶ್ವರಿ ಪದವಿ ಪೂರ್ವ ಕಾಲೇಜಿನ ಇತಿಹಾಸ ಉಪನ್ಯಾಸಕರಾದ ಅಮರೇಶಸ್ವಾಮಿ ತೋರಣದಿನ್ನಿ ಭಾಜನ ರಾಗಿದ್ದಾರೆ ಎಂದು ಸಂಸ್ಥೆಯ ಆಡಳಿ ತಾಧಿಕಾರಿ ವಿನಯಕುಮಾರ ಗಣಾಚಾರಿ ಹರ್ಷ ವ್ಯಕ್ತಪಡಿಸಿದರು.

ಪಟ್ಟಣದ ಶ್ರೀಉಮಾಮಹೇಶ್ವರಿ ಪದವಿ ಪೂರ್ವ ಕಾಲೇಜಿನಲ್ಲಿ ಮಾತನಾಡಿದ ಅವರು,ಅಮರೇಶ ಸ್ವಾಮಿ ಸುಮಾರು 8 ವರ್ಷಗಳಿಂದ ನಮ್ಮಸಂಸ್ಥೆಯಲ್ಲಿ ಇತಿಹಾಸ ಉಪನ್ಯಾಸಕರಾಗಿ, ಪ್ರಾಚಾರ್ಯರಾಗಿ, ಪ್ರಸ್ತುತ ಉಪನ್ಯಾಸ ವೃತ್ತಿಯ ಜೊತೆಗೆ ಸಹ ಆಡಳಿತಧಿಕಾರಿಯಾಗಿ, ವಿದ್ಯಾರ್ಥಿಗಳಿಗೆ ಅಚ್ಚುಮೆಚ್ಚಿನ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ ಸಂಸ್ಥೆಯ ಯಶೋಗಾತಿಗೆ ಇವರ ಕೊಡುಗೆ ಅಮೋಘವಾದದ್ದು ಎಂದು ಅವರ ಸಾಧನೆಯನ್ನು ಕೊಂಡಾಡಿದರು.

ಸೆಪ್ಟೆಂಬರ್ 20 ರಂದು ಬೆಳಿಗ್ಗೆ 10 ಗಂಟೆಗೆ ಸಿಂಧನೂರು ನಗರದ ರೈಲ್ವೆ ಸ್ಟೇಷನ್ ರಸ್ತೆಯ ಶ್ರೀಸತ್ಯ ಗಾರ್ಡನ್ ಸಭಾಂಗಣದಲ್ಲಿ ಪ್ರಶಸ್ತಿ ವಿತರಿಸಿ ಸನ್ಮಾನಿಸಲಾಗುವುದು ಎಂದು ಜಿಲ್ಲಾ ಖಾಸಗಿ ಶಾಲಾ ಕಾಲೇಜು ಆಡಳಿತ ಮಂಡಳಿ ಒಕ್ಕೂಟದ ವ್ಯವಸ್ಥಾಪಕರು ತಿಳಿಸಿದರು.

ಸಂಸ್ಥೆಯ ಅಧ್ಯಕ್ಷ ಶರಣಬಸವ ಗಣಾಚಾರಿ, ಪ್ರಾಚಾರ್ಯರು, ವಿರೇಶ ಆದೋನಿ ,ಜಿ ಸುರೇಶ, ಉಪನ್ಯಾಸಕರಾದ ಮಂಜುನಾಥ, ಯಮನೂರಪ್ಪ ಚನ್ನಬಸವ, ರವಿಕುಮಾರ, ಗಂಗಾಧರ, ಶಂಕರೆಪ್ಪ, ಉಪನ್ಯಾಸಕಿಯರಾದ ಸ್ವರ್ಣಲತಾ, ಶಾಂತಲಾ, ನಿರ್ಮಲಾ, ಸಾವಿತ್ರಿ, ಮತ್ತು ಕಾಲೇಜಿನ ಸಿಬ್ಬಂದಿಗಳು,ವಿದ್ಯಾರ್ಥಿಗಳು ಹಾಗೂ ಹಳೆಯ ವಿದ್ಯಾರ್ಥಿ ಬಳಗ ಶುಭ ಹಾರೈಸಿದರು.



**ಖಾಸಗಿ ಶಿಕ್ಷಣ ಸಂಸ್ಥೆಗಳು ಕೊಡಮಾಡುವ ಜಿಲ್ಲಾ ಆದರ್ಶ ಶಿಕ್ಷಕ ಪ್ರಶಸ್ತಿ ನನಗೆ ಸಿಕ್ಕಿದ್ದು ಖುಷಿ ತಂದಿದೆ, ಈ ಪ್ರಶಸ್ತಿ ನನಗೆ ಮತ್ತಷ್ಟು ಜವಾಬ್ದಾರಿಯನ್ನು ಹೆಚ್ಚಿಸಿದೆ. ಪ್ರಮಾಣಿಕವಾಗಿ, ನಿಸ್ವಾರ್ಥದಿಂದ ಸೇವೆ ಸಲ್ಲಿಸಿದ್ದೆ, ಮುಂದೆಯೂ ಸಂಸ್ಥೆಯ ಏಳಿಗೆಗೆ, ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗೆ ಶ್ರೇಮಿಸುವೆ.**

**– ಅಮರೇಶ ಸ್ವಾಮಿ ತೋರಣದಿನ್ನಿ ಜಿಲ್ಲಾ ಆದರ್ಶ ಶಿಕ್ಷಕ ಪ್ರಶಸ್ತಿ ಪುರಸ್ಕೃತ**

## ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷ ಯು.ನಿಸಾರ್ ಅಹಮದ್ ವಸತಿ ಶಾಲೆಗೆ ಭೇಟಿ; ಪರಿಶೀಲನೆ

ಯುವ ಮಾರ್ಗ ಸುದ್ದಿ

**ರಾಯಚೂರು,ಸೆ.11–**ನಿವೃತ್ತ ಐಪಿಎಸ್ ಅಧಿಕಾರಿಯಾಗಿರುವ ಹಾಗೂ ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷರಾದ ಯು.ನಿಸಾರ್ ಅಹಮದ್ ಅವರು ಗುರುವಾರ ನಗರದ ಚಂದ್ರಬಂಡಾ ರಸ್ತೆಯ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಭೇಟಿ ನೀಡಿ ಪರಿಶೀಲನೆ ಮಾಡಿದರು.

ಅವರು, ಬೆಳಿಗ್ಗೆ 11.30ಕ್ಕೆ ನಗರದ ಯರಮರಸ್ ಸರ್ಕಿಟ್ ಹೌಸನಿಂದ ಸಂಚಾರ ಆರಂಭಿಸಿದರು. ಭೇಟಿ ಸಂದರ್ಭದಲ್ಲಿ, ಅವರು ವಸತಿ ಶಾಲೆಯಲ್ಲಿನ ಮೂಲಭೂತ ಸೌಕರ್ಯಗಳ ಬಗ್ಗೆ ಮಾಹಿತಿ ಪಡೆದುಕೊಂಡರು. ವಸತಿ ಶಾಲೆಯ ವಿದ್ಯಾರ್ಥಿಗಳಿಗೆ ಗುಣಮಟ್ಟದ ಆಹಾರ, ಕುಡಿಯುವ ನೀರು, ಸೋಪು, ತಲೆಗೆ ಹಚ್ಚುವ ಎಣ್ಣೆ ಸೇರಿದಂತೆ ಎಲ್ಲಾ ಸೌಕರ್ಯಗಳನ್ನು ಸಮರ್ಪಕವಾಗಿ ನೀಡಬೇಕು ಎಂದು ವಸತಿ ಶಾಲೆಯ ಅಧಿಕಾರಿಗಳಿಗೆ



ನಿರ್ದೇಶನ ನೀಡಿದರು.

ವಿದ್ಯಾರ್ಥಿಗಳ ಹೆಸರು, ಅವರ ಗುರಿ ಬಗ್ಗೆ ಕೇಳುತ್ತ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದ ಅಧ್ಯಕ್ಷರು, ಸರಿಯಾಗಿ ಓದಿ ಉನ್ನತ ಮಟ್ಟದ ಅಧಿಕಾರಿಗಳಾಗಿ ಆಯ್ಕೆಯಾಗಿ ತಂದೆ– ತಾಯಿಗಳಿಗೆ ಹಾಗೂ ಶಾಲೆಗೆ, ಜಿಲ್ಲೆ, ರಾಜ್ಯಕ್ಕೆ ಒಳ್ಳೆಯ ಹೆಸರು ತರಬೇಕು. ನಿರಂತರ ಅಭ್ಯಾಸ ಮಾಡುತ್ತ ಶಿಕ್ಷಕರ ಮಾರ್ಗದರ್ಶನ ಪಡೆಯಬೇಕು. ಗುರಿ ಸಾಧನೆಗೆ ಸತತ ಪ್ರಯತ್ನಿಸಬೇಕು ಎಂದು ಸಲಹೆ ಮಾಡಿದರು.

ವಿದ್ಯಾರ್ಥಿಗಳು ಸಮಾಜ ಸೇವಾ ಮನೋ ಭಾವ ಬೆಳೆಸಿಕೊಳ್ಳಬೇಕು. ವೈಯಕ್ತಿಕ ಜೀವನದಲ್ಲಿ ಶಿಸ್ತು, ಸಮಯ ಪ್ರಜ್ಞೆ ಕಾಪಾ ಡಿಕೊಂಡು ನಡೆಯಬೇಕು. ವಿದ್ಯಾರ್ಥಿಗಳ ಶೈಕ್ಷಣಿಕ ಏಳ್ಗೆಗಾಗಿ ಸರ್ಕಾರ ಅನೇಕ ಯೋಜನೆಗಳನ್ನು ಜಾರಿ ಮಾಡಿದ್ದು, ಅದರ ಸದುಪಯೋಗ ಮಾಡಿಕೊಳ್ಳಬೇಕು ಎಂದರು.

**ಅಧಿಕಾರಿಗೆ ಸೂಚನೆ:** **(2ನೇಪುಟಕ್ಕೆ)**

## ಮೊದಲನೇಯ ಪುಟದಿಂದ

# ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷ ಯು.ನಿಸಾರ್ ಅಹಮದ್ ವಸತಿ ಶಾಲೆಗೆ ಭೇಟಿ; ಪರಿಶೀಲನೆ

ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳನ್ನು ವಸತಿ ಶಾಲೆಗೆ ಆಹ್ವಾನಿಸಿ ಅವರಿಂದ ಒಳ್ಳೆಯ ಸಂದೇಶ ನೀಡಿಸುವ ವ್ಯವಸ್ಥೆ ಮಾಡಬೇಕು ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಪ್ರವೀಣಕುಮಾರ ಅವರಿಗೆ ಅಧ್ಯಕ್ಷರು ಸೂಚನೆ ನೀಡಿದರು.

ಶಿಕ್ಷಕರೊಂದಿಗೆ ಸಭೆ: ಇದೆ ವೇಳೆ ಅಧ್ಯಕ್ಷರು, ವಸತಿ ಶಾಲೆಯ ಶಿಕ್ಷಕರೊಂದಿಗೆ ಸಭೆ ನಡೆಸಿ ನಾನಾ ವಿಷಯಗಳ ಬಗ್ಗೆ ಚರ್ಚಿಸಿದರು. ಶಿಕ್ಷಕರಿಗೆ ವಿದ್ಯಾರ್ಥಿಗಳ ಬಗ್ಗೆ ಕಾಳಜಿ ಇರಬೇಕು. ವಿದ್ಯಾರ್ಥಿ ಸ್ನೇಹಿಯಾಗಿರಬೇಕು. ಜೀವನ ಕೌಶಲ್ಯಗಳನ್ನು ಕಲಿಸಬೇಕು. ಕಲಿಯಲು ಸ್ಫೂರ್ತಿದಾಯಕ ಮತ್ತು ಸಹಾನುಭೂತಿಯ ವಾತಾವರಣ ಸೃಷ್ಟಿಸಬೇಕು. ಕೇವಲ ವಿಷಯವನ್ನು ಮಾತ್ರವಲ್ಲದೆ, ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ, ಬುದ್ಧಿವಂತಿಕೆ, ಚಿಂತನೆಯನ್ನು ಬೆಳೆಸಬೇಕು ಎಂದರು.

ಫಲಿತಾಂಶ ಹೆಚ್ಚಳಕ್ಕೆ ಶಿಕ್ಷಕರು ಶ್ರಮಿಸಿ: ಭೇಟಿ ಸಂದರ್ಭದಲ್ಲಿ ಅಧ್ಯಕ್ಷರು ಎಸ್ಸೆಸ್ಸೆಲ್ಸಿ ಫಲಿತಾಂಶದ ಬಗ್ಗೆ ಕೇಳಿದರು. ಶಿಕ್ಷಕರು ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ನೀಡಿ ಪ್ರಸಕ್ತ ಸಾಲಿನ ಎಸ್ಎಸ್ಎಲ್ಸಿ ಪರೀಕ್ಷೆಯಲ್ಲಿ ಕಳೆದ ಬಾರಿಗಿಂತ ಈ ಬಾರಿ ಫಲಿತಾಂಶ ಹೆಚ್ಚಳಕ್ಕೆ ಪ್ರಾಮಾಣಿಕವಾಗಿ ಶ್ರಮಿಸಬೇಕು. ವಿದ್ಯಾರ್ಥಿಗಳ ಪ್ರಾಥಮಿಕ, ಪ್ರೌಢಶಿಕ್ಷಣದ ಹಂತಗಳ ಬುನಾದಿ ಗಟ್ಟಿಯಾಗಬೇಕು. ಈ ನಿಟ್ಟಿನಲ್ಲಿ ಯೋಚಿಸಿ ಶಿಕ್ಷಕರು ಶ್ರದ್ಧೆಯಿಂದ ತಮ್ಮ ಕಾರ್ಯ ನಿರ್ವಹಣೆ ಮಾಡಬೇಕೆಂದರು.

ಇದೇ ಸಂದರ್ಭದಲ್ಲಿ ಅಧ್ಯಕ್ಷರ ವಿಶೇಷ ಕರ್ತವ್ಯಧಿಕಾರಿ ಮುಜಿಬುಲ್ಲಾ ಜಫಾರಿ, ಎಸ್ಪಿ ಅಬ್ದುಲ್ ಖಾದರ್, ತಾಲೂಕು ಕಲ್ಯಾಣಾಧಿಕಾರಿ ನರಸಿಂಹ ನಾಯಕ, ವಸತಿ ಶಾಲೆಯ ಪ್ರಾಂಶುಪಾಲರಾದ ವಿಜಯಮಹಾಂತೇಶ್, ವಸತಿ ಶಾಲೆಯ ವಾರ್ಡನ್ ವಿಶ್ವನಾಥ, ರಾಯಚೂರು ಗ್ರಾಮೀಣ ಪೊಲೀಸ್ ಠಾಣೆಯ ಅಧಿಕಾರಿ ಶಾಂತಮ್ಮ ಸೇರಿದಂತೆ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಇದ್ದರು.

# ಜಿಲ್ಲಾ ಪಂಚಾಯತ್ ಉಪಾ ಕಾರ್ಯದರ್ಶಿಗಳಿಂದ ತಾಲೂಕಿನ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನೆ

ಹೋರತು ಪಡಿಸಿ ಬೇರೆಯವರು ಉಳಿದುಕೊಳ್ಳುತ್ತಿರುವ ಬಗ್ಗೆ ಅನೇಕ ದೂರುಗಳು ಬರುತ್ತಿದ್ದು ತಾಲೂಕು ಮಟ್ಟದ ಅಧಿಕಾರಿಗಳು ಹಾಗೂ ವಸತಿ ನಿಲಯಗಳ ನಿಲಯ ಪಾಲಕರು ಕಟ್ಟು ನಿಟ್ಟಿನ ಕ್ರಮ ಕೈಗೊಳ್ಳಬೇಕು.ಹಾಗೂ ಆಕಸ್ಮಿಕ ಭೇಟಿ ನೀಡಿ ಪರಿಶೀಲಿಸಬೇಕು.ವಿದ್ಯಾರ್ಥಿಗಳಿಗೆ ಗುಣಮಟ್ಟದ ಆಹಾರ ಹಾಗೂ ಅಗತ್ಯ ಮೂಲ ಸೌಕರ್ಯಕಲ್ಪಿಸಿ .ವಸತಿ ನಿಲಯಗಳಲ್ಲಿನ ವಿದ್ಯಾರ್ಥಿಗಳ ಹಾಜರಾತಿಯನ್ನು ಬಯೋಮೇಟ್ರಿಕ್‌ನಲ್ಲಿಯೇ ತೆಗೆದು ಕೊಳ್ಳಬೇಕು ಆರೋಗ್ಯ ಪರೀಕ್ಷೆ ಮಾಡಿಸಬೇಕು.

ತಾಲೂಕಿನ ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿನ 7 ವಸತಿ ನಿಲಯಗಳಲ್ಲಿ 16 ನೂರು ವಿದ್ಯಾರ್ಥಿಗಳಿದ್ದು ಅಗತ್ಯ ಸೌಕರ್ಯ ನೀಡಿ ಎಂದು ತಾ.ಸಮಾಜ ಕಲ್ಯಾಣಾಧಿಕಾರಿ ನಟರಾಜ ಹಾಗೂ ಪ.ವರ್ಗಗಳ ಕಲ್ಯಾಣಾಧಿಕಾರಿ ಮಹಾಲಿಂಗಪ್ಪ ಇಂಗಳದಾಳ್ ರವರಿಗೆ ಸೂಚಿಸಿದರು.

ಸರ್ಕಾರವು ಮಕ್ಕಳಲ್ಲಿನ ಅಪೌಷ್ಟಿಕತೆಯ ನಿವಾರಣೆಗಾಗಿ ಸಾಕಷ್ಟು ಅನುದಾನವನ್ನು ವೆಚ್ಚಮಾಡುತ್ತಿದೆ ಮಹಿಳಾ ಮತ್ತು ಮಕ್ಕಳ ಇಲಾಖೆಯಿಂದ ತಾಲೂಕಿನ 272 ಅಂಗನವಾಡಿಗಳಲ್ಲಿನ ಮಕ್ಕಳಿಗೆ ಅಗತ್ಯವಾದ ಪೌಷ್ಟಿಕ ಆಹಾರ ನೀಡಿ ಹಾಗೂ ಕಿಶೋರಿಯರಿಗೆ ಬಾಣಂತಿಯರಿಗೆ,ಗರ್ಭಿಣಿಯರಿಗೆ ಮೊಟ್ಟೆ ಮತ್ತು ಅಗತ್ಯ ಪೌಷ್ಟಿಕ ಆಹಾರ ನೀಡಿ.

ಬಾಡಿಗೆ ಕಟ್ಟಡಗಳಲ್ಲಿರುವ 77 ಅಂಗನವಾಡಿಗಳಿಗೆ ಸ್ವಂತ ಕಟ್ಟಡ ನಿರ್ಮಿಸಿಕೊಳ್ಳುವುದಕ್ಕೆ ಗ್ರಾಮ ಪಂಚಾಯಿತಿ ವತಿಯಿಂದ ಸೂಕ್ತವಾದ ನಿವೇಶನವನ್ನು ಪಿ.ಡಿ.ಓಗಳು ಗುರುತಿಸಿ ಕೊಡಬೇಕು ಸರ್ಕಾರಿ ಶಾಲೆಗಳ ಆವರಣದಲ್ಲಿ ನಿವೇಶನ ಇಲ್ಲವೇ ಖಾಲಿ ಕೊಠಡಿಗಳಿದಲ್ಲಿ ಅಂಗನವಾಡಿಗಳಿಗೆ ಬಳಕೆ ಮಾಡಕೊಳ್ಳುವುದಕ್ಕೆ ಅಗತ್ಯ ಕ್ರಮ ಕೈಗೊಳ್ಳುವಂತೆ ಶಿಶುಅಭಿವೃದ್ಧಿ ಅಧಿಕಾರಿ ಮನ್ಸೂರ್ ಅಹಮ್ಮದ್ ರವರಿಗೆ ಸೂಚಿಸಿದರು.

ತಾಲೂಕಿನಲ್ಲಿ ನಿಗದಿಗಿಂತ ಉತ್ತಮವಾಗಿ ಮಳೆ ಬಂದಿರುವುದರಿಂದ ರೈತರಿಗೆ ಅಗತ್ಯವಿರುವ ರಸಗೊಬ್ಬರವನ್ನು ಪೂರೈಕೆ ಮಾಡುವುದಕ್ಕೆ ಕ್ರಮ ಕೈಗೊಳ್ಳಿ ನಿಯಮಿತವಾಗಿ ಕೃಷಿ ಪರಿಕಾರಗಳ ಮಾರಾಟ ಕೇಂದ್ರಗಳಿಗೆ ಭೇಟಿ ನೀಡಿ ರಸಗೊಬ್ಬರ ಸೇರಿದಂತೆ ಕೃಷಿ ಪರಿಕಾರಗಳ ಮಾದರಿಯನ್ನು ಸಂಗ್ರಹಿಸಿ ಪ್ರಯೋಗಲಾಯಕ್ಕೆ ಕಳುಹಿಸಿ ನಕಲಿ ಕಂಡುಬಂದಲ್ಲಿ ಅಂತಹವರ ಮೇಲೆ ಕಾನೂನು ಕ್ರಮ ಕೈಗೊಳ್ಳುವಂತೆ ಹಾಗೂ ನರೇಗಾ ಯೋಜನೆಯಲ್ಲಿ ರೈತರಿಗೆ ವೈಯುಕ್ತಿಕ ಕಾಮಗಾರಿ ಕೈಗೊಳ್ಳುವುದಕ್ಕೆ ಹಾಗೂ ಕೃಷಿ ಹೊಂಡ ನಿರ್ಮಿಸಿಕೊಳ್ಳುವುದಕ್ಕೆ ಅಗತ್ಯ ಮಾಹಿತಿ ನೀಡುವಂತೆ ತಾ.ಸಹಾಯಕ ಕೃಷಿ ನಿರ್ದೇಶಕ ಗುರುನಾಥ ಭುಸನೂರೆ ರವರಿಗೆ ಸೂಚಿಸಿದರು.

ತೋಟಾಗಾರಿಕೆ ಇಲಾಖೆಯಿಂದ ದೊರೆಯುವ ಸೌಲಭ್ಯಗಳ ಬಗ್ಗೆ ರೈತರಿಗೆ ಹೆಚ್ಚಿನ ಮಾಹಿತಿ ನೀಡುವಂತೆ.ನರ್ಸರಿ ಅಬಿವೃದ್ಧಿ ಪಡಿಸಿ ರೈತರಿಗೆ ವಿತರಿಸುವಂತೆ ತೋಟಗಾರಿಕೆ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು. ಶಿಕ್ಷಣ ಇಲಾಖೆ.ಅಕ್ಷರದಾಸೋಹ ಇಲಾಖೆ ಅಧಿಕಾರಿಗಳು ಮಕ್ಕಳಿಗೆ ಶಾಲೆಗಳಲ್ಲಿನ ಮಕ್ಕಳಿಗೆ ನೀಡುವ ಆಹಾರದ ಬಗ್ಗೆ ಜಾಗ್ರತೆ ವಹಿಸಿ. ಮೊಟ್ಟೆ ಮತ್ತು ಬಾಳೆಹಣ್ಣು ವಿತರಿಸಿ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಚಂದ್ರಶೇಖರ .ಡಿ, ಅಕ್ಷರದಾಸೋಹ ಆದಿಕಾರಿ ಕುಬೇರಪ್ಪ ರವರಿಗೆ ಸೂಚಿಸಿದರು. ನಿಗದಿತ ಅವಧಿಯಲ್ಲಿ ಗುಣಮಟ್ಟದ ಕಾಮಗಾರಿ ಕೈಗೊಳ್ಳದ ಗುತ್ತಿಗೆದಾರರನ್ನು ಕಪ್ಪು ಪಟ್ಟಿಗೆ ಸೇರಿಸಿ ಇನೋಬ್ಬರಿಗೆ ಕಾಮಗಾರಿ ವಹಿಸುವಂತೆ ಲೋಕೋಪಯೋಗಿ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ಪಶು ಇಲಾಖೆಯಿಂದ ಜಾನುವರಿ ಸಾಕಣಿಕೆ ಕುರಿತು ಸರ್ಕಾರದಿಂದ ದೊರೆಯವ ಸೌಲಭ್ಯಗಳ ಕುರಿತು ಜಾನುವಾರು ಕುಟುಂಬಗಳಿಗೆ ಮಾಹಿತಿ ನೀಡುವಂತೆ ತಾ.ಪಶು ಸಹಾಯಕ ನಿರ್ದೇಶಕರಾದ ಡಾ. ಬಸವರಾಜ ಹಿರೇಮಠ ರವರಿಗೆ ಸೂಚಿಸಿದರು. ತಾಲೂಕಿನ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನೆ ನಡೆಸಿದರು.

ತಾ.ಪಂ. ಇ.ಓ. ಖಾಲೀದ್ ಅಹಮ್ಮದ್, ತಾ.ಪಂ.ಸಹಾಯಕ ನಿರ್ದೇಶಕರಾದ ದೀಪಾ ಸೇರಿದಂತೆ ತಾಲೂಕಿನ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಗ್ರಾಮ ಪಂಚಾಯಿತಿ ಅಬಿವೃದ್ಧಿ ಅಧಿಕಾರಿಗಳು ಇದ್ದರು.

# ಪ್ರಚೋದನಕಾರಿ ಭಾಷಣ ಸಿ.ಟಿ ರವಿ ವಿರುದ್ಧ ಎಫ್‌ಐಆರ್

ಮಾಡುವ ತಾಕತ್ತು ಹಿಂದೂ ಸಮಾಜಕ್ಕಿದೆ ಎಂಬ ಭಾಷಣ ಮಾಡಿದ್ದರು. ಇದು ಪ್ರಚೋದನಕಾರಿ ಭಾಷಣ ಎಂದು ಪೊಲೀಸರು ಸಿ.ಟಿ ರವಿ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಹೆದರುವ ಪ್ರಶ್ನೆಯಿಲ್ಲ

ನನ್ನ ವಿರುದ್ಧ ಪ್ರಕರಣ ದಾಖಲಿಸಿದ ತಕ್ಷಣ ನಾನು ಹೆದರುವ ಪ್ರಶ್ನೆಯೇ ಇಲ್ಲ. ಜನತೆಗಾಗಿ, ಹಿಂದುತ್ವಕ್ಕಾಗಿ ನನ್ನ ಹೋರಾಟ ನಿಲ್ಲದು ಎಂದು ಮಾಜಿ ಸಚಿವ ಸಿ.ಟಿ ರವಿ ಹೇಳಿದರು.

ಮದ್ದೂರಿನಲ್ಲಿ ನಿನ್ನೆ ನಡೆದ ಗಣೇಶೋತ್ಸವ ಸಂದರ್ಭದಲ್ಲಿ ಪ್ರಚೋದನಕಾರಿ ಭಾಷಣ ಮಾಡಿದ ಆರೋಪದ ಮೇಲೆ ತಮ್ಮ ವಿರುದ್ಧ ಪ್ರಕರಣ ದಾಖಲಿಸಿರುವುದಕ್ಕೆ ಪ್ರತಿಕ್ರಿಯೆ ನೀಡಿದ ಅವರು, ನನ್ನ ಮೇಲೆ ಪ್ರಕರಣಗಳು ಹೊಸದೇನಲ್ಲ, ಪ್ರಕರಣ ದಾಖಲಿಸಿ ನನ್ನನ್ನು ಹೆದರಿಸಲು ಸಾಧ್ಯವಿಲ್ಲ. ಪ್ರಕರಣ ದಾಖಲಾಯಿತು ಎಂದು ಭಯಪಟ್ಟು ಮನೆಯಲ್ಲಿ ಕೂರುವ ಜಾಯಮಾನ ತಮ್ಮದಲ್ಲ ಎಂದು ಅವರು ಹೇಳಿದರು.ನಮ್ಮನ್ನು ಪ್ರಚೋದನೆ ಮಾಡಿದ್ದು ಯಾರು? ಕಲ್ಲು ತೂರಾಟ ಮಾಡಿರುವವರಲ್ಲವೇ? ಪ್ರಚೋದನೆಗಳಿಗೆ ಪ್ರತಿಕ್ರಿಯೆ ಇರುತ್ತದೆ ಎಂದು ನಾನು ಹೇಳಿದ್ದೇನೆ. ಪ್ರಕರಣ ದಾಖಲಿಸಲಿ ಭಯವಿಲ್ಲ. ಜನತೆಗಾಗಿ ನನ್ನ ಹೋರಾಟ ಮುಂದುವರೆಯುತ್ತದೆ ಎಂದು ಅವರು ಹೇಳಿದರು.

# ರಾಯಚೂರು ಸಿಟಿ, ಗ್ರಾಮೀಣ ಪ್ರದೇಶದಲ್ಲಿ ಹಠಾತ್ ದಾಳಿ: ಕೆಲ ಆಸ್ಪತ್ರೆಗಳಿಗೆ ಬೀಗ

ಕೆಪಿಎಂಇ ಕಾಯ್ದೆಯ ನಿಯಮಗಳನ್ನು ಪಾಲಿಸಲು ತಂಡದ ಸದಸ್ಯರು ಸೂಚನೆ ನೀಡಿದರು.

ಜಿಲ್ಲಾ ಆರ್.ಸಿ.ಹೆಚ್. ಅಧಿಕಾರಿಗಳು, ತಾಲೂಕು ಆರೋಗ್ಯ ಅಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳ ಕಾರ್ಯಾಲಯದ ರಿಜಿಸ್ಟರ್ ಅವರನ್ನೊಳಗೊಂಡ ಎರಡನೇ ತಂಡವು ಯರಗೇರಾದ ಗಫೂರು ಕ್ಲಿನಿಕ್ ಗೆ ಭೇಟಿ ಮಾಡಿ ಸಿಜ್ ಮಾಡಿತು. ಬಳಿಕ ರಾಯಚೂರಿನ ಮೆಡಿಕೇರ್ ಕ್ಲಿನಿಕ್, ಪೂಜಾರಿ ಕ್ಲಿನಿಕ್, ವಕ್ಫ ಆಸ್ಪತ್ರೆಗೆ ಭೇಟಿ ನೀಡಿ ಕೆಪಿಎಂಇ ಕಾಯ್ದೆಯಡಿ ನೋದಣಿ ಮಾಡಿದ ಬಗ್ಗೆ ಪರಿಶೀಲಿಸಿದರು. ಕೆಪಿಎಂಇ ಕಾಯ್ದೆಯ ನಿಯಮಗಳನ್ನು ಪಾಲಿಸಲು ತಂಡದ ಸದಸ್ಯರು ಸೂಚನೆ ನೀಡಿದರು.

ಕೆಪಿಎಂಇ ಕಾಯ್ದೆಯಡಿ ಯಾರು ನೊಂದಣಿ ಮಾಡಿಲ್ಲವೋ ಅಂತಹವರ ವಿರುದ್ಧ ಕೆಪಿಎಂಇ ಕಾಯ್ದೆ ಅಡಿಯಲ್ಲಿ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ. ಮತ್ತು ಯಾವುದೇ ವೈದ್ಯಕೀಯ ಅರ್ಹತೆ ಇಲ್ಲದೇ ಆಸ್ಪತ್ರೆ ನಡೆಸಿದಲ್ಲಿ ಅಂತಹ ನಕಲಿ ವೈದ್ಯರ ವಿರುದ್ಧ ಕಠಿಣ ಕ್ರಮಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

# ಕಾಲೇಜು ಪ್ರತಿಭೆಗಳಿಗೆ ದೈಹಿಕ ಶಿಕ್ಷಣ ಕೊರತೆ



**ವಾಡಿ,ಸೆ.11–** ಪದವಿಪೂರ್ವ ಶಿಕ್ಷಣ ಪಡೆಯಲು ದಾಖಲಾಗುವ ಕಾಲೇಜು ಕ್ರೀಡಾ ಪ್ರತಿಭೆಗಳು ದೈಹಿಕ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ ಎಂದು ಚಿತ್ತಾಪುರ ತಾಲೂಕು ದೈಹಿಕ ಶಿಕ್ಷಣ ಪರಿವೀಕ್ಷಣಾಧಿಕಾರಿ ಶಿವಶರಣಪ್ಪ ಮಂತಾಳೆ ಕಳವಳ ವ್ಯಕ್ತಪಡಿಸಿದರು.

ಶಾಲಾ ಶಿಕ್ಷಣ (ಪದವಿ ಪೂರ್ವ) ಇಲಾಖೆ ಹಾಗೂ ರಾವೂರ ಸಚ್ಚಿದಾನಂದ ಪದವಿಪೂರ್ವ ಕಾಲೇಜು ಸಂಯುಕ್ತಾಶ್ರಯದಲ್ಲಿ ರಾವೂರ ಗ್ರಾಮದ ಸಿದ್ಧಲಿಂಗೇಶ್ವರ ವಿದ್ಯಾಭಿವೃದ್ಧಿ ಸಂಸ್ಥೆಯ ಮೈದಾನದಲ್ಲಿ ಏರ್ಪಡಿಸಲಾಗಿದ್ದ ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳ ಚಿತ್ತಾಪುರ ತಾಲೂಕು ಮಟ್ಟದ ಕ್ರೀಡಾಕೂಟ ಉದ್ಘಾಟಿಸಿ ಅವರು ಮಾತನಾಡಿದರು. ವಿಷಯ ಶಿಕ್ಷಣದಂತೆ ದೈಹಿಕ ಶಿಕ್ಷಣವೂ ಕೂಡ ಬೋಧನೆಯ ಭಾಗವಾಗಿದೆ. ಪ್ರೌಢ ಶಾಲೆಗಳಿಗೆ ಸರಕಾರ ದೈಹಿಕ ಶಿಕ್ಷಕರನ್ನು ನೀಡಿದೆ. ಆದರೆ ಪ್ರಾಥಮಿಕ ಹಾಗೂ ಪದವಿಪೂರ್ವ ಶಿಕ್ಷಣದ ವಿದ್ಯಾರ್ಥಿಗಳು ದೈಹಿಕ ಶಿಕ್ಷಣ ಶಿಕ್ಷಕರಿಲ್ಲದೆ ಕ್ರೀಡೆಗಳಿಂದ ವಂಚಿತರಾಗುತ್ತಿದ್ದಾರೆ. ದೈಹಿಕ ಶಿಕ್ಷಕರ ಕೊರತೆ ನೀಗಿಸಿದರೆ ಕ್ರೀಡಾ ಪ್ರತಿಭೆಗಳು ಬೆಳಕಿಗೆ ಬರಲು ಅನುಕೂಲವಾಗುತ್ತದೆ. ಅಲ್ಲದೆ ಖಾಲಿ ಇರುವ ಹುದ್ದೆಗಳು ಭರ್ತಿಯಾಗಿ ಉದ್ಯೋಗವಕಾಶ ದೊರಕಿಸಿದಂತಾಗುತ್ತದೆ. ಈ ದಿಶೆಯಲ್ಲಿ ಸರಕಾರ ಚಿಂತಿಸಿ ಮಕ್ಕಳ ಶಾರೀರಿಕ ಸದೃಢತೆಗೆ ಕಾಳಜಿ ತೋರಬೇಕು ಎಂದರು.

ಸಿದ್ಧಲಿಂಗೇಶ್ವರ ಸಂಸ್ಥಾನ ಮಠದ ಪೀಠಾಧಿಪತಿ ಪೂಜ್ಯ ಸಿದ್ಧಲಿಂಗ ಸ್ವಾಮೀಜಿ ಅವರು ಹಾಕಿ ಮಾಂತ್ರಿಕ ಮೇಜರ್ ಧ್ಯಾನಚಂದ್ ಭಾವಚಿತ್ರಕ್ಕೆ ಪುಷ್ಪಮಾಲೆ ಅರ್ಪಿಸಿದರು. ಪತ್ರಕರ್ತ ಮಡಿವಾಳಪ್ಪ ಹೇರೂರ ಕ್ರೀಡಾ ಧ್ವಜಾರೋಹಣ ನೆರವೇರಿಸಿದರು.ಅತಿಥಿಗಳು ಕ್ರೀಡಾ ಜ್ಯೋತಿಯನ್ನು ಸ್ವೀಕರಿಸುವ ಮೂಲಕ ಆಟಗಾರರಿಗೆ ಕ್ರೀಡಾ ಪ್ರಮಾಣ ವಚನ ಬೋಧಿಸಿದರು. ಚಿತ್ತಾಪುರ, ಕಾಳಗಿ ಹಾಗೂ ಶಹಾಬಾದ ವಲಯಗಳ ವಿವಿಧ ಕಾಲೇಜುಗಳ ಕ್ರೀಡಾ ತಂಡಗಳು ಕ್ರೀಡಾಕೂಟದಲ್ಲಿ ಭಾಗವಹಿಸಿದ್ದವು.

ದೈಹಿಕ ಶಿಕ್ಷಕರ ಸಂಘದ ರಾಜ್ಯ ಉಪಾಧ್ಯಕ್ಷ, ಕಲಬುರಗಿ ಜಿಲ್ಲಾಧ್ಯಕ್ಷ ಚನ್ನಬಸಪ್ಪ ಕೊಲ್ಲೂರ, ತಾಲೂಕು ಅಧ್ಯಕ್ಷ ವೀರಭದ್ರಪ್ಪ ಗುರುಮಠಕಲ್, ಸಚ್ಚಿದಾನಂದ ಕಾಲೇಜಿನ ಪ್ರಾಚಾರ್ಯ ಕೆ.ಐ.ಬಡಿಗೇರ, ಗ್ರಾಪಂ ಅಧ್ಯಕ್ಷೆ ಸುಮಿತ್ರಾ ತುಮಕೂರ, ಮುಖಂಡರಾದ ಚನ್ನಣ್ಣ ಬಾಳಿ, ಡಾ.ಗುಂಡಣ್ಣ ಬಾಳಿ, ಅಣ್ಣಾರಾವ ಬಾಳಿ, ದೈಹಿಕ ಶಿಕ್ಷಕರ ಸಂಘದ ತಾಲೂಕು ಪದಾಧಿಕಾರಿಗಳಾದ ದೇವಿಂದ್ರಪ್ಪ ದೊರೆ, ವೆಂಕಟೇಶ, ಹಣಮಂತ ಬಿರಾದಾರ, ಮಣಿಸಿಂಗ್ ಚವ್ಹಾಣ, ಭೋಜನಗೌಡ ಪಾಟೀಲ, ಸುರೇಶ ರಾಂಪುರೆ, ಕಸಾಪ ವಾಡಿ ಕಾರ್ಯದರ್ಶಿ ಚಂದ್ರು ಕರಣಿಕ, ಶರಣು ಜ್ಯೋತಿ, ವಿಜಯಕುಮಾರ ಭೀಮನಳ್ಳಿ ಸೇರಿದಂತೆ ಇತರರು ಪಾಲ್ಗೊಂಡಿದ್ದರು. ಅನಸೂಯಾ ಹೂಗಾರ ಪ್ರಾರ್ಥಿಸಿದರು. ಕೆ.ಐ. ಬಡಿಗೇರ ಸ್ವಾಗತಿಸಿದರು. ಸಿದ್ದಲಿಂಗ ಬಾಳಿ ನಿರೂಪಿಸಿ, ವಂದಿಸಿದರು. ವಿವಿಧ ಕಾಲೇಜು ತಂಡದ ವಿದ್ಯಾರ್ಥಿಗಳು ಕಬಡ್ಡಿ, ಖೋಖೋ, ವಾಲಿಬಾಲ್, ಥ್ರೋಬಾಲ್, ರನ್ನಿಂಗ್, ಉದ್ದಜಿಗಿತ ಮತ್ತು ಎತ್ತರ ಜಿಗಿತ ಸ್ಪರ್ಧೆಗಳಲ್ಲಿ ಉತ್ತಮ ಪ್ರದರ್ಶನ ನೀಡಿ ಪ್ರತಿಭೆ ಮೆರೆದರು.

# ಮಹಾತ್ಕಾರ್ಯಗಳಿಗೆ ಮನಸ್ಸೆ ಮೂಲಾಧಾರ : ಹಾರಕೂಡ ಶ್ರೀ



**ಬೀದರ್,ಸೆ.11–**ಸೃಷ್ಟಿಕರ್ತ ಪರಮಾತ್ಮನನ್ನು ಕುರಿತು ಬಹು ಎತ್ತರದ ಭಕ್ತಿಯ ಮನಸ್ಸು ಇದ್ದರೆ ಅಂಥಹವರಿಂದ ಸಮಾಜದಲ್ಲಿ ಮಹತ್ಕಾರ್ಯಗಳು ಘಟಿಸುತ್ತವೆ ಎಂದು ಹಾರಕೂಡದ ಡಾ. ಚನ್ನವೀರ ಶಿವಾಚಾರ್ಯರು ನುಡಿದರು.

ತಾಲೂಕಿನ ಬೇಡರವಾಡಿ (ಗ) ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿದ ವೀರ ಹನುಮಾನ ದೇವಸ್ಥಾನದ ಕಳಸಾರೋಹಣ ಸಮಾರಂಭದ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದ ಶ್ರೀಗಳು, ಮನಸ್ಸು ಶುದ್ಧವಾದಷ್ಟು ಸತ್ಕಾರ್ಯಗಳು ಅರಳುತ್ತವೆ.

ಹೀಗಾಗಿ ಮನಸ್ಸಿನ ಸುದ್ದಿಕರಣಕ್ಕಾಗಿ ಸಾಧು ಸಂತರ ಸತ್ಸಂಗದಲ್ಲಿ ಮನಸಾರೆ ತೊಡಗಿಸಿಕೊಳ್ಳಬೇಕು.ಸುದೀರ್ಘ ಕಾಲದ ಪೂಜೆ ಪುನಸ್ಕಾರಗಳಿಗಿಂತಲೂ ಒಂದು ಕ್ಷಣದ ಗುರು ಸಾನಿಧ್ಯ ಶ್ರೇಷ್ಠವಾಗಿರುತ್ತದೆ.ಗುರು ಗೋವಿಂದನ ಅನುಗ್ರಹ ಪಡೆಯಬೇಕಾದರೆ, ಹೆತ್ತ ತಾಯಿಯನ್ನು ಅತ್ಯಂತ ಗೌರವದಿಂದ ಕಾಣಬೇಕು. ದೈವತ್ವದ ಗಣಿಯಾಗಿರುವ ತಾಯಿಯನ್ನು ಪೂಜ್ಯನೀಯವಾಗಿ ನೋಡಿಕೊಳ್ಳುವವರ ಬಾಳು ಸುಭಿಕ್ಷೆಯಿಂದ ಕೂಡಿರುತ್ತದೆ ಎಂದು ನುಡಿದರು.ಸಮಸ್ತ ಭಾರತೀಯರ ಆರಾಧ್ಯ ದೇವರಾದ ಶ್ರೀರಾಮಚಂದ್ರರ ಭಕ್ತ ವೀರ ಹನುಮಾನ ಮಂದಿರ ನಿರ್ಮಿಸಿ ಕಳಸಾರೋಹಣ ಹಾಡಿರುವ ಬೇಡರವಾಡಿ (ಯು) ಗ್ರಾಮದ ಎಲ್ಲ ಜನತೆಯಲ್ಲಿ ಆಂಜನೇಯ ಸ್ವಾಮಿಯ ಆದರ್ಶಗಳು ಬೆಳೆದು ಬರುವಂತಾಗಲಿ ಹಾಗೂ ಸರ್ವರಿಗೂ ಸನ್ಮಂಗಳವಾಗಲಿ ಎಂದು ಶುಭ ಹಾರೈಸಿದರು.

ಗೋವಿಂದ ಗುರೂಜಿ ಸ್ವಾಗತಿಸಿ ನಿರೂಪಣೆ ಮಾಡಿದರು.ಕಾರ್ತಿಕ ಸ್ವಾಮಿ ಯಲ್ಲದಗುಂಡಿ ಪ್ರಾರ್ಥನಾ ಗೀತೆ ಹಾಡಿದರು.ಆಶಿತೋಷ ಮಹಾರಾಜ, ಅವಧೂತಪುರಿ ಮಹಾರಾಜ, ಧನರಾಜ ಭೋಸಲೆ, ಮುಂತಾದವರು ಉಪಸ್ಥಿತರಿದ್ದರು.ಕಾರ್ಯಕ್ರಮಕ್ಕೂ ಮೊದಲು ಹಾರಕೂಡ ಶ್ರೀಗಳ ಅದ್ದೂರಿ ಮೆರವಣಿಗೆ ಜರುಗಿತು.

# ದುಶ್ಚಟಗಳಿಂದಾಗುವ ಪರಿಣಾಮಗಳ ಬಗ್ಗೆ ಜಾಗೃತಿ ಅವಶ್ಯಕ : ಶೆಂಬೆಳ್ಳಿ

**ಔರಾದ್,ಸೆ.11–**ದುಶ್ಚಟಗಳಿಂದ ಆಗುವ ಪರಿಣಾಮಗಳ ಬಗ್ಗೆ ಯುವ ಜನತೆಯಲ್ಲಿ ಜಾಗೃತಿ ಮೂಡಿಸುವ ಕೆಲಸ ಆಗಬೇಕಾಗಿದೆ ಎಂದು ತಾಲ್ಲೂಕು ಮದ್ಯ ವರ್ಜನಾ ಶಿಬಿರ ಅಧ್ಯಕ್ಷ ಅಶೋಕ ಶೇಂಬೆಳ್ಳಿ ಹೇಳಿದರು.

ತಾಲೂಕಿನ ಸಂತಪುರ ಮುರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಬುಧವಾರ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಸಹಕಾರದೊಂದಿಗೆ ಜರುಗಿದ 'ಸ್ವಾಸ್ಥ್ಯ ಸಂಕಲ್ಪ' ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ವ್ಯಸನ ಮುಕ್ತ, ಸದೃಢ ಭಾರತ ನಿರ್ಮಾಣದಲ್ಲಿ ಯುವಕರ ಕೊಡುಗೆ ಪ್ರಮುಖವಾಗಿದೆ. ಮಾದರಿ ಸಮಾಜ ನಿರ್ಮಾಣದ ಪ್ರಯತ್ನ ನಮ್ಮೆಲ್ಲರ ಹೊಣೆ ಆಗಿದೆ. ಮಕ್ಕಳು ಮೊಬೈಲ್ ಗಳಿಂದ ದೂರ ಉಳಿದು, ಕಠಿಣ ಪರಿಶ್ರಮದಿಂದ ಅಭ್ಯಾಸ ಮಾಡಿ, ಮುಂದಿನ ದಿನಗಳಲ್ಲಿ ಸಮಾಜದ ಒಳ್ಳೆ ವ್ಯಕ್ತಿಗಳಾಗಿ ಹೊರಹೋಮ್ಮಬೇಕು ಎಂದರು.

ಪ್ರಾಂಶುಪಾಲ ತುಕಾರಾಮ ಯಾತಪ್ಪನವರ್ ಮಾತನಾಡಿ ಇತ್ತೀಚಿನ ದಿನಗಳಲ್ಲಿ ಪ್ರಾಥಮಿಕ ಹಂತದ ಮಕ್ಕಳು ವಿವಿಧ ವ್ಯಸನಗಳ ದಾಸರಾಗುತ್ತಿದ್ದು, ಅದನ್ನು ತಪ್ಪಿಸುವ ನಿಟ್ಟಿನಲ್ಲಿ ಶ್ರೀ ಕ್ಷೇತ್ರ



ಧರ್ಮಸ್ಥಳ ಯೋಜನೆ ಶಾಲಾ ಕಾಲೇಜುಗಲ್ಲಿ ಶಿಬಿರ ಮತ್ತು ಜಾಗೃತಿ ಜಾಥಾ ಹಮ್ಮಿಕೊಂಡು ವ್ಯಸನ ಮುಕ್ತ ಸಮಾಜ ಮಾಡಲು ಶ್ರಮಿಸುತ್ತಿರುವುದು ಸಂತಸದ ಸಂಗತಿಯಾಗಿದೆ. ಯುವ ಜನತೆ ಕೆಟ್ಟ ಚಟಗಳ ವಿರುದ್ದ ಹೋರಾಡುವ ಗುಣ ಹೊಂದಿದ್ದಾಗ ಮಾತ್ರ ಸದೃಢ ಭಾರತದ ಕನಸನ್ನು ನನಸಾಗಲು ಸಾಧ್ಯವಾಗುತ್ತದೆ ಎಂದರು.ಯೋಜನಾಧಿಕಾರಿ ರಾಘವೇಂದ್ರ ಗೌಡ ಮಾತನಾಡಿ, ಯುವ ಜನತೆಯಲ್ಲಿ ದುಶ್ಚಟಗಳ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ಧರ್ಮಸ್ಥಳದ ಧರ್ಮಾಧಿಕಾರಿ ವಿರೇಂದ್ರ ಹೆಗ್ಗಡೆ ಅವರು ಶಾಲಾ ಮಟ್ಟದಲ್ಲಿ ಈ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದ್ದು, ಇದರ ಪ್ರಯೋಜನ ಪಡೆದು ಮಾದರಿ ಪ್ರಜೆಗಳಾಗಿ ಬೆಳೆಯಬೇಕು ಎಂದು ಸಲಹೆ ನೀಡಿದರು.

# ನೇಪಾಳದಲ್ಲಿ ಮಧ್ಯಂತರ ಸರ್ಕಾರ

**ಕಠ್ಮಂಡು, ಸೆ.11–** ರಾಷ್ಟ್ರೀಯ ಹಿತಾಸಕ್ತಿಗೆ ಅನುಗುಣವಾಗಿ ನೇಪಾಳದ ಮಧ್ಯಂತರ ಸರ್ಕಾರವನ್ನು ಮುನ್ನಡೆಸಲು ಜೆನ್–ಝಿ ನಾಯಕರು ನೀಡಿರುವ ಪ್ರಸ್ತಾವನೆಯನ್ನು ಒಪ್ಪಿಕೊಳ್ಳಲು ಸಿದ್ಧವಿರುವುದಾಗಿ ಮಾಜಿ ಮುಖ್ಯ ನ್ಯಾಯಮೂರ್ತಿ ಸುಶೀಲಾ ಕಾರ್ಕಿ ಇಂದು ಹೇಳಿದ್ದಾರೆ.

ಇದೇ ವೇಳೆ 71 ವರ್ಷದ ಕಾರ್ಕಿ ಅವರು, ನೇಪಾಳದ ಯುವಕರು ತಮ್ಮ ಮೇಲೆ ಇಟ್ಟಿರುವ ನಂಬಿಕೆಯಿಂದ ನಾನು ಭಾವುಕಳಾಗಿದ್ದೇನೆ ಎಂದಿದ್ದಾರೆ. ಸದ್ಯ ಲಭ್ಯವಿರುವ ಮಾಹಿತಿಯ ಪ್ರಕಾರ, ಜೆನ್–ಝಿ ಯುವ ಪ್ರತಿನಿಧಿಗಳು ಮಧ್ಯಂತರ ಸರ್ಕಾರದ ನಾಯಕತ್ವಕ್ಕಾಗಿ ಸೇನಾ ಮುಖ್ಯಸ್ಥರನ್ನು ಕೂಡ ಭೇಟಿ ಮಾಡಲಿದ್ದಾರೆ ಎಂದು ಹೇಳಲಾಗಿದೆ.

ಮಧ್ಯಂತರ ಸರ್ಕಾರದ ನೂತನ ಪ್ರಧಾನಿಯಾಗಿ ಮಾಜಿ ಮುಖ್ಯ ನ್ಯಾಯಮೂರ್ತಿ ಸುಶೀಲಾ ಅವರ ಹೆಸರನ್ನು ಜೆನ್–ಝಿ ಪ್ರತಿನಿಧಿಗಳು ಅಂತಿಮಗೊಳಿಸಿದ್ದಾರೆ. ಆದಾಗ್ಯೂ ಈ ವಿಷಯದಲ್ಲಿ ಇನ್ನೂ ಕೆಲವು ವಿರೋಧಾಭಾಸಗಳಿವೆ. ಸೇನಾ ಮುಖ್ಯಸ್ಥರೊಂದಿಗಿನ ಸಭೆ ಪ್ರಾರಂಭವಾಗುವ ಮೊದಲು ಜೆನ್–ಝಿ ಪ್ರತಿಭಟನಾಕಾರರಲ್ಲಿ ಈ ಹೆಸರಿನ ಕುರಿತು ಒಮ್ಮತಕ್ಕೆ ಬಂದು ನಂತರ ಸೇನಾ ಮುಖ್ಯಸ್ಥರೊಂದಿಗೆ ಚರ್ಚಿಸಿದ ಬಳಿಕ ಅದನ್ನು ಔಪಚಾರಿಕವಾಗಿ ಘೋಷಿಸಲಾಗುತ್ತದೆ ಎಂದು ಹೇಳಲಾಗುತ್ತಿದೆ.

ಮಧ್ಯಂತರ ಸರ್ಕಾರ ಮುನ್ನಡೆಸಲು ಸುಶೀಲಾ ನಾಯಕತ್ವ

ನೇಪಾಳದಲ್ಲಿ ಅಶಾಂತಿ ಮತ್ತು ಕೆ.ಪಿ.ಶರ್ಮಾ ಒಲಿ ಅವರು ಪ್ರಧಾನಿ ಹುದ್ದೆಗೆ ರಾಜೀನಾಮೆ ನೀಡಿದ ಬೆನ್ನಲ್ಲೇ ಸುಶೀಲಾ ಕಾರ್ಕಿ ಅವರ ಹೆಸರು ಹೊಸ ಪರಿವರ್ತನೆ ಸರ್ಕಾರವನ್ನು ಮುನ್ನಡೆಸುವ ಸಂಭಾವ್ಯ ಅಭ್ಯರ್ಥಿಗಳಲ್ಲಿ ಒಬ್ಬರಾಗಿ ಹೊರಹೊಮ್ಮಿದೆ.

ಸುಗಮ ಪರಿವರ್ತನೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ದೇಶದಲ್ಲಿ ಸ್ಥಿರತೆಯನ್ನು ಕಾಪಾಡಿಕೊಳ್ಳಲು ರಾಜಕೀಯ ಪಕ್ಷಗಳು ಮತ್ತು ಮಧ್ಯಸ್ಥಗಾರರು ಒಮ್ಮತವನ್ನು ಬಯಸುವುದರೊಂದಿಗೆ ನೇಪಾಳವು ಅನಿಶ್ಚಿತತೆಯ ಅವಧಿಯತ್ತ ಹೊರಳುತ್ತಿರುವಾಗ ಈ ಬೆಳವಣಿಗೆ ನಡೆದಿದೆ.

ಸರ್ಕಾರದಿಂದ ಉತ್ತರದಾಯಿತ್ವ ಮತ್ತು ಪಾರದರ್ಶಕತೆಯನ್ನು ಒತ್ತಾಯಿಸಲು ಯುವಜನರು, ಮುಖ್ಯವಾಗಿ ವಿದ್ಯಾರ್ಥಿಗಳ ನೇತೃತ್ವದಲ್ಲಿ ವ್ಯಾಪಕ ಆಂದೋಲನವಾದ ಜೆನ್–ಝಿ ಪ್ರತಿಭಟನೆಗೆ ನೇಪಾಳವು ಸಾಕ್ಷಿಯಾಗಿದೆ ಮತ್ತು ನಲುಗಿದೆ.

ತೆರಿಗೆ ಆದಾಯ ಮತ್ತು ಸೈಬರ್ ಸೆಕ್ಯುರಿಟಿ ಕಾಳಜಿಗಳನ್ನು ಉಲ್ಲೇಖಿಸಿ ಪ್ರಮುಖ ಸಾಮಾಜಿಕ ಮಾಧ್ಯಮ ವೇದಿಕೆಗಳ ಮೇಲೆ ಸರ್ಕಾರ ನಿಷೇಧ ಹೇರಿದ ನಂತರ ಕಳೆದ ಸೆಪ್ಟೆಂಬರ್ 8ರಂದು ಕಠ್ಮಂಡು ಮತ್ತು ಪೋಖರಾ, ಬುಟ್ವಾಲ್ ಮತ್ತು ಬಿರ್ಗುಂಜ್ ಸೇರಿದಂತೆ ಇತರ ಪ್ರಮುಖ ನಗರಗಳಲ್ಲಿ ವ್ಯಾಪಕ ಪ್ರತಿಭಟನೆ ನಡೆದಿದ್ದವು.



ಪ್ರತಿಭಟನೆ ತೀವ್ರಗೊಳ್ಳುತ್ತಿದ್ದಂತೆಯೇ ಪರಿಸ್ಥಿತಿ ಉಲ್ಬಣಗೊಂಡು ಸಂಘರ್ಷ ಏರ್ಪಟ್ಟಿತು. ಭದ್ರತಾ ಪಡೆಗಳ ಜತೆಗಿನ ಘರ್ಷಣೆಯಲ್ಲಿ ಕನಿಷ್ಠ 19 ಜನರು ಮೃತಪಟ್ಟಿದ್ದು, 500ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ಪರಿಸ್ಥಿತಿಯನ್ನು ನಿಯಂತ್ರಿಸಲು ಕಠ್ಮಂಡು ಸೇರಿದಂತೆ ಹಲವಾರು ನಗರಗಳಲ್ಲಿ ಕರ್ಫ್ಯೂ ಹೇರಲಾಗಿದೆ.

ಯಾರು ಈ ಸುಶೀಲಾ ಕಾರ್ಕಿ?

71 ವರ್ಷದ ಸುಶೀಲಾ ಕಾರ್ಕಿ ಅವರು 2016 ರ ಜುಲೈ 2017 ರ ಜೂನ್ ವರೆಗೆ ನೇಪಾಳದ ಮೊದಲ ಮಹಿಳಾ ಮುಖ್ಯ ನ್ಯಾಯಮೂರ್ತಿಯಾಗಿ ಸೇವೆ ಸಲ್ಲಿಸುವ ಮೂಲಕ ಇತಿಹಾಸ ನಿರ್ಮಿಸಿದ್ದಾರೆ.

1952 ರ ಜೂನ್ 7ರಂದು ಬಿರಾಟ್ ನಗರದಲ್ಲಿ ಜನಿಸಿದ ಸುಶೀಲಾ ಕಾರ್ಕಿ, ಏಳು ಮಕ್ಕಳಲ್ಲಿ ಹಿರಿಯವರಾಗಿದ್ದಾರೆ. 1970 ರಲ್ಲಿ ಬಿರಾಟ್ ನಗರದಲ್ಲಿ ಕಾನೂನು ಶಿಕ್ಷಣವನ್ನು ಪೂರ್ಣಗೊಳಿಸಿದ ನಂತರ ಅವರು ತಮ್ಮ ಕಾನೂನು ವೃತ್ತಿಜೀವನವನ್ನು ಪ್ರಾರಂಭಿಸಿದರು. ನಂತರ ಅವರು 2007 ರಲ್ಲಿ ಹಿರಿಯ ವಕೀಲರಾಗಿ ಬಡ್ತಿ ಹೊಂದಿದರು. 2009 ರ ಜನವರಿಯಲ್ಲಿ ಸುಪ್ರೀಂಕೋರ್ಟ್ ನ ತಾತ್ಕಾಲಿಕ ನ್ಯಾಯಾಧೀಶರಾಗಿ ನೇಮಕಗೊಂಡ ಕಾರ್ಕಿ, 2010ರಲ್ಲಿ ಖಾಯಂ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿದ್ದಾರೆ.

ಕರ್ಕಿಗೆ ಅನುಮೋದನೆ

ನೇಪಾಳದ ಪ್ರಧಾನಿ ಕೆಪಿ ಶರ್ಮಾ ಓಲಿ ಸರ್ಕಾರ ಉರುಳಿಸಿದ ಜನರಲ್–ಝುಡ್ ಪ್ರತಿಭಟನೆಗಳ ಹಿಂದೆ ಇದ್ದ ಕಠ್ಮಂಡು ಮೇಯರ್ ಬಲೇಂದ್ರ ಶಾ, ಮಧ್ಯಂತರ ಸರ್ಕಾರ ಮುನ್ನಡೆಸಲು ಮಾಜಿ ಮುಖ್ಯ ನ್ಯಾಯಮೂರ್ತಿ ಸುಶೀಲಾ ಕರ್ಕಿ ಅವರ ಆಯ್ಕೆ ಅನುಮೋದಿಸಿದ್ದಾರೆ.

ಪ್ರತಿಭಟನಾಕಾರರು ಭಯಭೀತರಾಗಬೇಡಿ ಮತ್ತು ಸರ್ಕಾರ ರಚನೆಗೆ ಆತುರಪಡಬೇಡಿ ಮತ್ತು ತಾಳ್ಮೆಯಿಂದಿರಿ ಎಂದು ಅವರು ಪ್ರತಿಭಟನಾಗಾರರಿಗೆ ಸಲಹೆ ನೀಡಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡಿರುವ ಅವರು ಹಿಮಾಲಯನ್ ದೇಶ "ಸುವರ್ಣ ಭವಿಷ್ಯದ"ತ್ತ ಹೆಜ್ಜೆ ಹಾಕುತ್ತಿದೆ "ದಯವಿಟ್ಟು ಸಮಯದಲ್ಲಿ ಭಯಪಡಬೇಡಿ, ತಾಳ್ಮೆಯಿಂದಿರಿ. ದೇಶ ಮಧ್ಯಂತರ ಸರ್ಕಾರ ಪಡೆಯಲಿದೆ. ಈ ಮಧ್ಯಂತರ ಸರ್ಕಾರದ ಕೆಲಸವೆಂದರೆ ಹೊಸ ಜನಾದೇಶ ಪಡೆಯುವುದಾಗಿದೆ ಎಂದಿದ್ದಾರೆ.

ಮಧ್ಯಂತರ ಸರ್ಕಾರದ ಮುಖ್ಯಸ್ಥೆಯಾಗಿ ಸುಶೀಲಾ ಕರ್ಕಿ ಅವರ ಆಯ್ಕೆಯನ್ನು ಬೆಂಬಲಿಸುವುದಾಗಿ 35 ವರ್ಷದ ಬಲೇಂದ್ರ ಶಾ ಹೇಳಿದ್ದು. "ನಿಮ್ಮ ತಿಳುವಳಿಕೆ, ವಿವೇಚನೆ ಮತ್ತು ಏಕತೆಯನ್ನು ಪೂರ್ಣ ಹೃದಯದಿಂದ ಗೌರವಿಸಲು ಬಯಸುತ್ತೇನೆ ಎಂದಿದ್ದಾರೆ.

"ಈಗ ಆತುರಪಡಲು ಬಯಸುವ ಸ್ನೇಹಿತರಿಗೆ, ಉತ್ಸಾಹ, ಚಿಂತನೆ, ಸಮಗ್ರತೆ ದೇಶಕ್ಕೆ ಶಾಶ್ವತವಾಗಿ ಬೇಕಾಗಿದೆಯೋ ಹೊರತು ತಾತ್ಕಾಲಿಕವಾಗಿ ಅಲ್ಲ. ಅದಕ್ಕಾಗಿ ಚುನಾವಣೆಗಳು ಇರುತ್ತವೆ. ದಯವಿಟ್ಟು ಆತುರಪಡಬೇಡಿ" ಎಂದು ಮನವಿ ಮಾಡಿದ್ದಾರೆ.

ಸಂಸತ್ತನ್ನು ತಕ್ಷಣವೇ ವಿಸರ್ಜಿಸಿ "ಜೆನ್–ಝುಡ್ ತಂದ ಐತಿಹಾಸಿಕ ಕ್ರಾಂತಿ ಸಂರಕ್ಷಿಸಲು" ಮಧ್ಯಂತರ ಆಡಳಿತ ತರಬೇಕು ಎಂದು ನೇಪಾಳ ಅಧ್ಯಕ್ಷ ರಾಮ್ ಚಂದ್ರ ಪೌಡೆಲ್ ಅವರಿಗೆ ಮನವಿ ಮಾಡಿದ್ದಾರೆ.

ಭ್ರಷ್ಟಾಚಾರ ಮತ್ತು ಪಾರದರ್ಶಕತೆಯ ಕೊರತೆಯಿಂದಾಗಿ ಪ್ರಧಾನಿ ಕೆಪಿ ಶರ್ಮಾ ಓಲಿ ಸರ್ಕಾರವನ್ನು ರಾಷ್ಟ್ರವ್ಯಾಪಿ ಪ್ರತಿಭಟನೆಗಳಿಂದ ಪದಚ್ಯುತಗೊಳಿಸಲಾಗಿದೆ.

## ನಮ್ಮ ಹಿರಿಯರು ನೀಡಿದ ಜಾನಪದ ಸಂಸ್ಕೃತಿ ಉಳಿಸಿ ಬೆಳೆಸಬೇಕು



ಮನವಿಸಿದ್ದಾರೆ. ಕಡಿಮೆ ಎಂದರು 25 ಲಕ್ಷದ ವರೆಗೆ ಅನುದಾನ ಕಲ್ಪಿಸುವ ವ್ಯವಸ್ಥೆ ಮಾಡಲಾಗುವುದು ಎಂದು ವೈರಾಗೆ ಭರವಸೆ ನೀಡಿದ ಅವರು ಇಂತಹ ಜನಪದ ಸಂಸ್ಕೃತಿ ಉಳಿಸಲು ನಾವು ಕೂಡ ನಿಮ್ಮೊಂದಿಗೆ ಕೈಜೋಡಿಸುತ್ತೇವೆ ಎಂದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಜಿಲ್ಲಾಧ್ಯಕ್ಷ ಪ್ರೋ. ಶಂಭುಲಿಂಗ ಕಾಮಣ್ಣ ಜನಪದ ಸಂಸ್ಕೃತಿ ಕುರಿತು ಉಪನ್ಯಾಸ ನೀಡಿ, ನೀತಿ, ಸಂದೇಶ ಹಾಗೂ ಮಾನವೀಯ ಮೌಲ್ಯಗಳು ಜನಪದ ಸಾಹಿತ್ಯದಲ್ಲಿ ಅಡಗಿವೆ ಎಂದರು.

ಜನಪದ ಸಂಸ್ಕೃತಿ ಪರಿಶುದ್ಧವಾಗಿದೆ. ಇಲ್ಲಿ ತೊರಿಕೆ ಇಲ್ಲ. ನುಡಿದಂತೆ ನಡೆಯುವ ಜನಪದ ಸಂಸ್ಕೃತಿಯಾಗಿದೆ. ಜನಪದರು ತಾಯಿಗೆ ದೇವರು ಎಂದವರು. ಅಕ್ಷರ ಕಲಿತವ ಭ್ರಷ್ಟರಾಗಬಹುದು ಆದರೆ ಸಂಸ್ಕೃತಿ ಕಲಿತವ ಎಂದು ಭ್ರಷ್ಟರಾಗಲ್ಲ.

ಇಂದಿನ ಯಾಂತ್ರಿಕ ಯುಗದಲ್ಲಿ ಯುವ ಪೀಳಿಗೆಯಲ್ಲಿ ಸಂಸ್ಕೃತಿ ಇಲ್ಲದ ಕಾರಣ ಬೆಂಗಳೂರನಂತಹ ನಗರದಲ್ಲಿ ಪ್ರತಿ ದಿನ ಸಾವಿರಾರು ಸಂಖ್ಯೆಯಲ್ಲಿ ವಿಚ್ಛೇದನ ಪ್ರಕರಣಗಳು ನಡೆಯುತ್ತಿವೆ. ಗಂಡ–ಹೆಂಡತಿ ಎಂಬುದು ಆಟಿಕೆ ವಸ್ತುವಾಗಿದೆ ಎಂದು ಕಾಮಣ್ಣ ಕಳವಳ ವ್ಯಕ್ತಪಡಿಸಿದರು.ಒಂದು ವೇಳೆ ಸೆಟಲೈಟ್ ಸಮಸ್ಯೆಯಿಂದ ಮೊಬೈಲ್ ಬಂದ ಆದರೆ ಶೇ. 70 ರಷ್ಟು ಜನ ಹುಚ್ಚಾಗುತ್ತಾರೆ. ಉಳಿದ ಶೇ.30ರಷ್ಟಿರುವ ಜನರಿಗೆ ಕಲ್ಲಿನಿಂದ ಹೊಡೆಯುತ್ತಾರೆ. ಯಾವ ವಸ್ತುಗಳು ಮಾನವನಿಗೆ ಪೂರಕವಾಗಬೇಕಾಗಿದ್ದವು ಅವುಗಳು ಮಾರಕವಾಗಿ ಪರಿಣಮಿಸಿವೆ ಎಂದರು.ರಾಷ್ಟ್ರೀಯ ಜನಪದ ಬುಡಕಟ್ಟು ಕಲಾ ಪರಿಷತ್ತು ನ್ಯೂ ದೆಹಲಿಯ ಪ್ರಧಾನ ಕಾರ್ಯದರ್ಶಿ ಡಾ. ರಾಜಕುಮಾರ ಹೆಬ್ಬಾಳೆ ಮಾತನಾಡಿ. ಪ್ರತಿ ವರ್ಷ ಆಗಸ್ಟ 22 ರಂದು ವಿಶ್ವ ಜಾನಪದ ದಿನಾಚರಣೆ ಆಚರಿಸಲಾಗುತ್ತಿದೆ. ಭವ್ಯ ಭಾರತದ ಸಂಸ್ಕೃತಿ ಉಳಿಸಿ ಯುವ ಪೀಳಿಗೆಗೆ ಪರಿಚಯ ಮಾಡುವ ಉದ್ದೇಶದಿಂದ ನಾವು ಕೂಡ ಕಾಲೇಜು ವಿದ್ಯಾರ್ಥಿಗಳಿಗಾಗಿ ಇಂತಹ ಕಾರ್ಯಕ್ರಮ ಆಯೋಜಿಸಿದ್ದೇವೆ ಎಂದರು.ಕರ್ನಾಟಕ ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಪ್ರೋ. ಜಗನ್ನಾಥ ಹೆಬ್ಬಾಳೆ ಅಧ್ಯಕ್ಷತೆ ವಹಿಸಿ ಬೀದರನಲ್ಲಿ ಮೂರು ದಿನಗಳ ವರೆಗೆ ದೇಶದ ಪ್ರತಿ ರಾಜ್ಯದಿಂದ ವಿವಿಧ ಕಲಾ ತಂಡಗಳನ್ನು ಕರೆತರುವ ಮೂಲಕ ಜನಪದ ಸಂಸ್ಕೃತಿ ಕಾರ್ಯಕ್ರಮ ಆಯೋಜಿಸುವುದಲ್ಲದೇ ಕಾರ್ಯಕ್ರಮದ ಸ್ಮರಣ ಸಂಚಿಕೆ ಕೂಡ ಹೊರತರಲಾಗುವುದು ಇದಕ್ಕೆ ಎಲ್ಲರ ಸಹಕಾರ ಅಗತ್ಯ ಎಂದು ನುಡಿದರು.

# ಮಕ್ಕಳ ಕುರಿತು ಅತಿ ಕಾಳಜಿ.... ಖಂಡಿತ ಬೇಡ

ತುಸು ಆತಂಕ ಮತ್ತು ದುಗುಡವನ್ನು ಹೊತ್ತ ಓರ್ವ ಹೆಣ್ಣು ಮಗಳು ಪಾರ್ಕಿನ ಬೆಂಚೊಂದರ ಮೇಲೆ ಕುಳಿತು

ತನ್ನ ಮೂರು ಮಕ್ಕಳು ಆಟವಾಡುವುದನ್ನು ನೋಡುತ್ತಿದ್ದಳು ಅದೇ ಸಮಯದಲ್ಲಿ ಅಲ್ಲಿ ಹಾರಿ ಬಂದ ಹದ್ದು ಆಕೆಯ ಬಳಿಯೇ ಬಂದು ಕುಳಿತು ಕೊಂಡಿತು.

ಅಮ್ಮ ನಿನ್ನನ್ನು ನೋಡಿದರೆ ನೀನು ತುಂಬ ಕಳವಳಗೊಂಡಿರುವೆ ಎಂದು ತೋರುತ್ತದೆ... ಯಾಕೆ ಎಲ್ಲವೂ ಸರಿಯಾಗಿದೆ ಅಲ್ಲವೇ? ಎಂದು ಕೇಳಿತು ಆ ಪಕ್ಷಿ.

ನಿನ್ನ ಮಾತು ನಿಜ...ನನಗೆ ಭಯವಾಗುತ್ತಿದೆ. ನಾನು ನನ್ನ ಮಕ್ಕಳಿಗೆ ಜಗತ್ತಿನ ಎಲ್ಲಾ ಒಳ್ಳೆಯ ವಿಷಯಗಳನ್ನು ಕೊಡ ಮಾಡಲು ಬಯಸುತ್ತೇನೆ, ಆದರೆ ನನಗೆ ನಾನು ಅವರನ್ನು ಸರಿಯಾಗಿ ಬೆಳೆಸುತ್ತಿದ್ದೇನೆಯೇ ಇಲ್ಲವೇ ಎಂಬ ವಿಷಯದ ಕುರಿತು ಗೊಂದಲ ಇದೆ.

ಆಕೆಯ ಗೊಂದಲದ ಅರಿವಾದ ಹದ್ದು ಜಾಣ್ಮೆಯಿಂದ ಆಕೆಯೆಡೆ ನೋಡಿ " ಅತ್ಯಂತ ಸುರಕ್ಷಿತವಾಗಿ, ಎಲ್ಲ ರೀತಿಯ ಅನುಕೂಲಗಳನ್ನು ಮಾಡಿಕೊಡುವುದನ್ನು ಬೆಳೆಸುವಿಕೆ ಎಂದು ಹೇಳುವುದಿಲ್ಲ. ನನ್ನ ಪುಟ್ಟ ಮರಿಗಳು ಹುಟ್ಟಿದಾಗ ನನ್ನ ಗೂಡು ತುಂಬಾ ಮೆದು ಮತ್ತು ಸುರಕ್ಷಿತ ಎಂದು ತೋರುತ್ತದೆ ನಿಜ, ಆದರೆ ಒಂದೊಮ್ಮೆ ಮರಿಗಳು ಬೆಳೆದು ಅವುಗಳ ರೆಕ್ಕೆ ಬಲಿತ ಹೊತ್ತಿನಲ್ಲಿ ನಾನು ಗೂಡಿನಲ್ಲಿನ ಮೆದುವಾದ ಗರಿಗಳನ್ನು ತೆಗೆದು ಹಾಕಿ ಮುಳ್ಳುಗಳನ್ನು ಹಾಗೆಯೇ ಬಿಡುತ್ತೇನೆ. ಆ ಮುಳ್ಳುಗಳ ಸ್ಪರ್ಶದಿಂದ ಬೇಸರಪಡುವ ಮರಿಗಳು ತಮ್ಮ ರೆಕ್ಕೆಗಳನ್ನು ಅಗಲಿಸಿ ಹೊರಗೆ ಹಾರಲು ಪ್ರಯತ್ನಿಸುತ್ತವೆ. ಈ ರೀತಿ ಅನಾನುಕೂಲತೆಯನ್ನು ಕಲ್ಪಿಸುವುದರ ಮೂಲಕ ನಾನು ಅವು ಉತ್ತಮವಾಗಿ ಬದುಕಲು ಕಲಿಯುವ ಅವಕಾಶವನ್ನು ಕಲ್ಪಿಸಿ ಕೊಡುತ್ತೇನೆ.

ಬೆಳವಣಿಗೆ ಎಂದರೆ ಅತಿಯಾದ ಸುರಕ್ಷಿತತೆ ಮತ್ತು ಅನುಕೂಲಕರ ವಾತಾವರಣವನ್ನು ಕಲ್ಪಿಸಿ ಕೊಡುವುದಲ್ಲ.

ಗಾಬರಿಯಿಂದ ಆಕೆ ಹಾಗಾದರೆ ಮರಿಗಳು ಬಿದ್ದು ಹೋದರೆ ಎಂದು ಕೇಳಿದಳು

ನಾನು ನನ್ನ ಮಕ್ಕಳನ್ನು ಆಕಾಶದಲ್ಲಿ ಹಾರಲು ಅನುವಾಗುವಂತೆ ಮೇಲಿನಿಂದ ಎಸೆಯುತ್ತೇನೆ. ಅವು ಹಾರದೆ ಹೋದಾಗ ನಾನು ಅವುಗಳನ್ನು ಹಿಡಿಯುತ್ತೇನೆ. ಹಾರಲು ಪ್ರಯತ್ನಿಸಲು ಹೇಳಿ ಮತ್ತೆ ಮೇಲೆ ಎಸೆಯುತ್ತೇನೆ... ಹೀಗೆ ಪದೇ ಪದೇ ಅವುಗಳನ್ನು ಹಾರಲು ಮೇಲೆ ಎಸೆದು ಅಂತಿಮವಾಗಿ ಅವು ಹಾರುವವರೆಗೂ ಅವರನ್ನು ಕಾಯುತ್ತೇನೆ. ಒಂದೊಮ್ಮೆ ರೆಕ್ಕೆ ಬಿಚ್ಚಿ ಅವರು ಗಗನದಲ್ಲಿ ಹಾರಿದರೆ ನನ್ನ ಜವಾಬ್ದಾರಿ ಅಲ್ಲಿಗೆ ಮುಗಿಯಿತು ನಾನು ಹಿಂದೆ ಸರಿಯುತ್ತೇನೆ.

ನಾನು ನನ್ನ ಮಕ್ಕಳು ನನ್ನ ಮೇಲೆ



ಅವಲಂಬಿತವಾಗಿರುವಂತೆ ಕಲಿಸುವುದಿಲ್ಲ. ನನ್ನ ಮಕ್ಕಳು ನನ್ನಿಂದ ದೂರವಾಗಿ ಸ್ವತಂತ್ರವಾಗಿ ಇರಲಿ ಎಂದು ನಾನು ಬಯಸುತ್ತೇನೆ. ಮಕ್ಕಳಿಗೆ ನೋವಾಗದಂತೆ ನಾನು ಬೆಳೆಸುವುದಿಲ್ಲ ಮಕ್ಕಳು ನೋವನ್ನು ಸಹಿಸಿಕೊಳ್ಳುವ ಶಕ್ತಿಯನ್ನು ಬೆಳೆಸಿಕೊಳ್ಳುವಂತೆ ನಾನು ಅವರನ್ನು ಬೆಳೆಸುತ್ತೇನೆ. ನೋವನ್ನು ಮೀರಿ ಬೆಳೆಯಲಿ ಎಂದು ಆಶಿಸುತ್ತೇನೆ... ಇಷ್ಟು ಹೇಳಿ ಹದ್ದು ಸುಮ್ಮನೆ ಕುಳಿತ ಹೊತ್ತಿನಲ್ಲಿ ಆ ಮೂರು ಮಕ್ಕಳ ತಾಯಿ ತನ್ನದೇ ಯೋಚನೆಗಳಲ್ಲಿ ಮಗ್ನಳಾದಳು. ನಂತರ ದೀರ್ಘವಾದ ನಿಟ್ಟುಸಿರನ್ನು ಹೊರ ಚೆಲ್ಲಿದ ಆಕೆ "ಹಾಗಾದರೆ ನಾನು ನನ್ನ ಮಕ್ಕಳನ್ನು

ಹಾಗೆಯೇ ಬಿದ್ದು ಬಿಡಲಿ ಎಂದು ಬಿಟ್ಟು ಬಿಡಲೇ" ಎಂದು ಕೇಳಿದ.

"ಇದನ್ನು ಬೀಳುವುದು ಎಂದು ನೀನೇಕೆ ಅಂದುಕೊಳ್ಳುವೆ... ಇದೊಂದು ಕಲಿಕೆ. ನನಗೆ ಅದೆಷ್ಟೇ ನೋವಾದರೂ ಕೂಡ ನನ್ನ ಮಕ್ಕಳು ಹಾರಲು ಕಲಿಸಬೇಕಾದದ್ದು ನನ್ನ ಕರ್ತವ್ಯ ಎಂದು ಆ ಹದ್ದು ಹೇಳಿದಾಗ ಅರ್ಥವಾಯಿತು ಎಂಬಂತೆ ಆ ಹೆಣ್ಣು ಮಗಳು ತಲೆದೂಗಿದಳು.

ಬುದ್ಧಿಜೀವಿ ಎಂದು ಹೆಸರಾದ ಮನುಷ್ಯ ಜನ್ಮದಲ್ಲಿ ಹುಟ್ಟಿಯೂ ಕೂಡ ಅದೆಂಥ ಮೌಢ್ಯ ತನ್ನಲ್ಲಿ ಇತ್ತು ಎಂದು ಅರಿತಾಗ ಆ ಹೆಣ್ಣುಮಗಳ ಮೊಗದಲ್ಲಿ

ನಗು ಮೂಡಿತು. ತನ್ನ ಬಳಿ ಓಡಿ ಬಂದ ತನ್ನ ಮಗುವನ್ನು ತಬ್ಬಿಕೊಂಡು ಆಕೆ ಹದ್ದನ್ನು ಕುರಿತು "ನಿನಗೆಷ್ಟು ಧನ್ಯವಾದಗಳನ್ನು ಹೇಳಿದರೂ ಕಡಿಮೆಯೇ. ನಿನ್ನಿಂದಾಗಿ ನಾನು ಮಕ್ಕಳನ್ನು ಹೇಗೆ ಬೆಳೆಸಬೇಕು ಎಂಬ ಬದುಕಿನ ಅತಿ

ದೊಡ್ಡ ಪಾಠವನ್ನು ಕಲಿತೆ" ಎಂದು ಕೃತಜ್ಞತೆಯಿಂದ ಹೇಳಿದಳು.

ನಂತರ ಮಕ್ಕಳನ್ನು ಕರೆದುಕೊಂಡು ಮನೆಯತ್ತ ನಡೆದ ಆಕೆ ಕೇವಲ ಆತಂಕವನ್ನು ಹೊಂದಿದ ತಾಯಿಯಾಗಿರಲಿಲ್ಲ... ಬದಲಾಗಿ ತನ್ನ ಮಕ್ಕಳನ್ನು ಹೇಗೆ ಬೆಳೆಸಬೇಕು ಎಂಬುದನ್ನು ಅರಿತ ಪ್ರಬುದ್ಧ ವ್ಯಕ್ತಿಯಾಗಿ ಬದಲಾಗಿದ್ದಳು ಎಂಬುದಕ್ಕೆ ಆಕೆಯ ನಡಿಗೆಯಲ್ಲಿ ಕಾಣುತ್ತಿದ್ದ ಆತ್ಮವಿಶ್ವಾಸವೇ ಸಾಕ್ಷಿಯಾಗಿತ್ತು.

ಕೇಳಿ ಸ್ನೇಹಿತರೆ, ನಿಮ್ಮ ಮಕ್ಕಳು ಮೇಲೆ ಹಾರಲಿ ಎಂದು ನೀವು ಬಯಸುವುದಾದರೆ ನೀವೇ ಎಲ್ಲವನ್ನು ಅವರಿಗೆ ಮಾಡಬೇಡಿ. ಅವರನ್ನು ಅತಿಯಾದ ಸುರಕ್ಷತೆಯಲ್ಲಿ ಬೆಳೆಸಬೇಡಿ... ಅವರು ಗಾಳಿಯಲ್ಲಿ ತೂರಾಡಲಿ, ಬದುಕಿನ ಸಂಘರ್ಷಗಳಲ್ಲಿ ಒದ್ದಾಡಲಿ ಮತ್ತು ಸೋಲಲಿ... ಹಾಗೆ ಅವರು ಸೋತಾಗ ಅವರಿಗೆ ನಿಮ್ಮ ಸಹಾಯ ಹಸ್ತವನ್ನು ಚಾಚಿರಿ. ಆದರೆ ಅವರ ಭಾರವನ್ನು ನೀವೇ ಹೊರಬೇಡಿ. ಭರವಸೆ ನೀಡಿ ಮತ್ತೆ ತಮ್ಮ ಕನಸುಗಳನ್ನು ಬೆನ್ನಟ್ಟಲು ಪ್ರೋತ್ಸಾಹಿಸಿ.

ಮಕ್ಕಳನ್ನು ನಿಜವಾಗಿಯೂ ನೀವು ಪ್ರೀತಿಸುವುದಾದರೆ ಅವರಿಗೆ ಜೀವನದ ಯಾವುದೇ ತೊಂದರೆಗಳು ಬಾದೆ ತರದಿರಲಿ ಎಂದು ರಕ್ಷಿಸುವ ಬದಲು ಅವರನ್ನು ಬದುಕಿನ ಎಲ್ಲಾ ಸವಾಲುಗಳಿಗೆ ತಮ್ಮನ್ನು ತಾವು ಒಡ್ಡಿಕೊಂಡು ಎದುರಿಸುವ ಛಾತಿಯನ್ನು ಬೆಳೆಸಿಕೊಳ್ಳಲು ಕಲಿಸಿ. ನೀವು ತೋರಿದ ಆಕಾಶದಲ್ಲಿ ಮಕ್ಕಳು ಹಾರುವುದು ಬೇಡ ಅವರು ತಮ್ಮದೇ ಆದ ಆಕಾಶವನ್ನು ಸೃಷ್ಟಿಸಿಕೊಳ್ಳಲಿ

ಮಕ್ಕಳಿಗಾಗಿ ಸುರಕ್ಷಿತ ರಸ್ತೆಯನ್ನು ನಿರ್ಮಿಸದಿರಿ...

ಯಾವುದೇ ರಸ್ತೆಯಲ್ಲಿ ಮಕ್ಕಳು ಓಡಾಡಲು ಅವರನ್ನು ಸಜ್ಜಾಗಿಸಿ ಎಂಬ ಜೋರ್ಡನ್ ಪೀಟರ್ಸನ್ ಮತ್ತು ಕಾರ್ಲ್ ಜಂಗ ರ ನುಡಿಗಳನ್ನು ಮುಂದುವರೆಸಿ ಮಕ್ಕಳು ಎಡವಲೇಬಾರದು ಎಂದು ಪ್ರತಿ ಹೆಜ್ಜೆಯನ್ನು ಹೇಳುವುದಾದರೆ ಪ್ರತಿ ಕಣ್ಣೀರು ಪ್ರತಿಯೊಂದು ಶ್ರಮ ಸಾರ್ಥಕವಾಗುವುದು ಮಕ್ಕಳು ತಮ್ಮ ಕಾಲ ಮೇಲೆ ತಾವು ಸ್ವತಂತ್ರವಾಗಿ ಜೀವನೋತ್ಸಾಹ ಮತ್ತು ಪ್ರೀತಿಯಿಂದ ಬದುಕನ್ನು ನಡೆಸಿದಾಗ ಮಾತ್ರ ಎಂಬುದನ್ನು ನೆನಪಿನಲ್ಲಿ ಇಟ್ಟುಕೊಂಡು ಅಂತೆಯೇ ನಡೆಯಬೇಕು.

ನಮ್ಮ ಮಕ್ಕಳು ಬದುಕಿನಲ್ಲಿ ಎಡವಲೇಬಾರದು ಎಂಬ ಹಠ ಬೇಡ, ಜಾಗರೂಕತೆ ಕೂಡ ಬೇಡ. ಮಕ್ಕಳ ಹಾದಿಯನ್ನು ಸುಲಭಗೊಳಿಸುವ ನಿಟ್ಟಿನಲ್ಲಿ ಅತಿಯಾದ ಸಹಾಯ ಬೇಡ.

ಇದಕ್ಕೆ ಪೂರಕವಾಗಿ ಮತ್ತೊಂದು ಕತೆ ನೆನಪಿಗೆ ಬರುತ್ತದೆ. ತಮ್ಮ ಮನೆಯಲ್ಲಿ ಗೂಡು ಕಟ್ಟಿರುವ ಹಕ್ಕಿಯೊಂದು ಪುಟ್ಟ ಪುಟ್ಟ ತತ್ತಿಗಳನ್ನು ಇಟ್ಟಿದ್ದು ಪ್ರತಿದಿನ ಅವುಗಳಿಗೆ ಕಾವು ಕೊಡುತ್ತಿತ್ತು. ಅದೊಂದು ದಿನ ತಾಯಿ ಹಕ್ಕಿಯು ಹೊರಗೆ ಹೋದಾಗ ಪ್ರತಿಯೊಂದು ಗೂಡಿನಿಂದ ಹೊರಗೆ ಬಿತ್ತು. ಆ ಮನೆಯ ಬಾಲಕನ ಕಣ್ಣು ಒಡೆಯದೇ ಇದ್ದರೂ ಆ ತತ್ತಿಯಲ್ಲಿದ್ದ ಪುಟ್ಟ ಮರಿ ಹಕ್ಕಿ ಹೊರಗೆ ಬರಲು ಪ್ರಯತ್ನಿಸುವುದು .ಕಾಣುತ್ತಿತ್ತು.. ಒಂದೆಡೆ ತತ್ತಿ ಬಿರುಕು ಬಿಟ್ಟಿದ್ದು ತತ್ತಿಯ ಒಳಗಡೆ ಮರಿ ಹಕ್ಕಿಯ ಗುದ್ದಾಟವನ್ನು ಕಂಡು ಬಾಲಕನ ಮನ ಕರಗಿತು. ಕೂಡಲೇ ತತ್ತಿಯ ಬಾಯನ್ನು ಅಗಲಗೊಳಿಸಿ ಮರಿ ಹಕ್ಕಿಯು ಹೊರಗೆ ಬರಲು ಅನುವು ಮಾಡಿಕೊಟ್ಟನು. ಆದರೆ ಹಾಗೆ ಹೊರಗೆ ಬಂದ ಮರಿ ಹಕ್ಕಿಯು ಕುಂಟುತ್ತಲೆ ಮುಂದೆ ಸಾಗಿತು. ಮರಿಯ ಕಾಲುಗಳಲ್ಲಿನ ಶಕ್ತಿ ಕುಂದಿದ್ದನ್ನು ನೋಡಿದ ಬಾಲಕನಿಗೆ ಬೇಸರವಾಯಿತು.

ಕೆಲ ಹೊತ್ತಿನ ಬಳಿಕ ಮನೆಗೆ ಬಂದ ತಂದೆಗೆ ಬಾಲಕ ನಡೆದ ವಿಷಯವನ್ನು ತಿಳಿಸಿದ. ಆಗ ತಂದೆಯು ಮಗನನ್ನು ಕೂರಿಸಿಕೊಂಡು ಮರಿ ಹಕ್ಕಿಯು ತತ್ತಿಯನ್ನು ತಾನೇ ಒಡೆದು ಬರಲು ಒದ್ದಾಡುತ್ತದೆಯಷ್ಟೇ? ಹಾಗೆ ಒದ್ದಾಡುವುದದಿಂದಲೇ ಅದರ ಕೈ ಕಾಲುಗಳು ಬಲಿಷ್ಠವಾಗುತ್ತಿದ್ದವು, ಆದರೆ ನೀನು ಅದಕ್ಕೆ ಸಹಾಯ ಮಾಡಲು ಹೋಗಿ ಅದು ಒದ್ದಾಡಲು ಸಾಧ್ಯವಾಗಲಿಲ್ಲ. ಅದರಿಂದಲೇ ಮರಿಯ ಕಾಲುಗಳ ಶಕ್ತಿ ಕುಂದುವಂತೆ

ಆಯಿತು ಎಂದು ಸೂಕ್ಷ್ಮವಾಗಿ ತಿಳಿಸಿ ಹೇಳಿದಾಗ ಬಾಲಕನಿಗೆ ತನ್ನ ತಪ್ಪಿನ ಅರಿವಾಯಿತು. ಆದರೆ ಕಾಲ ಮಿಂಚಿಹೋಗಿತ್ತು.

ನೋಡಿದಿರಾ ಸ್ನೇಹಿತರೆ! ನಮ್ಮ ಅತಿಯಾದ ಕಾಳಜಿ ನಮ್ಮ ಮಕ್ಕಳ ಬೆಳವಣಿಗೆಗೆ ಪೂರಕವಾಗಿ ಇರಬೇಕೆ ಹೊರತು ಮಾರಕವಾಗಿ ಅಲ್ಲ ಎಂಬುದನ್ನು ಅರಿತು ಮಕ್ಕಳನ್ನು ಬೆಳೆಸೋಣ.

**– ವೀಣಾ ಹೇಮಂತಗೌಡ ಪಾಟೀಲ್**
**ಮುಂಡರಗಿ, ಗದಗ್**

# ಸೆ. 14ರಂದು ರಾಯಚೂರಿನಲ್ಲಿ ಹಿಂದುಳಿದ ಜಾತಿಗಳ ಜಾಗೃತಿ ಸಮಾವೇಶ: ಕೆ.ಶಾಂತಪ್ಪ



**ಮಾನ್ವಿ,ಸೆ.11–** ಹಿಂದುಳಿದ ವರ್ಗಗಳ ಒಕ್ಕೂಟದ ವತಿಯಿಂದ ಸೆಪ್ಟೆಂಬರ್ 14ರಂದು ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಜಿಲ್ಲಾ ಮಟ್ಟದ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಹಿಂದುಳಿದ ವರ್ಗಗಳ ಒಕ್ಕೂಟದ ಅಧ್ಯಕ್ಷ ಕೆ. ಶಾಂತಪ್ಪ ತಿಳಿಸಿದರು.

ಪಟ್ಟಣದ ಗಂಗಾಮತಸ್ಥ ಸಮಾಜ ಭವನದಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿ, ಕಾಂತರಾಜ ಆಯೋಗದ ವರದಿ ಸ್ವೀಕರಿಸದೇ ಇರುವುದರಿಂದ ಹಿಂದುಳಿದ ವರ್ಗದ ಜನರಿಗೆ ಮೀಸಲಾತಿಯ ಲಾಭ ಪಡೆಯಲು ಸಾಧ್ಯವಾಗಿಲ್ಲ. ಆದ್ದರಿಂದ ಜಾತಿ ಸಮೀಕ್ಷೆಯ ಮಹತ್ವದ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡುವ ಉದ್ದೇಶದಿಂದ ಈ ಕಾರ್ಯಾಗಾರವನ್ನು ಆಯೋಜಿಸಲಾಗಿದೆ ಎಂದು ಅವರು ಹೇಳಿದರು.

ಜಿಲ್ಲಾ ಹಿಂದುಳಿದ ವರ್ಗಗಳ ಒಕ್ಕೂಟದ ವತಿಯಿಂದ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿನ ತಾ.ಅಧ್ಯಕ್ಷರ ನೇತೃತ್ವದಲ್ಲಿ ಅನೇಕ ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ರಾಜ್ಯದಲ್ಲಿ ಕಾಂತರಾಜ ಅಯೋಗವು ಸಮೀಕ್ಷೆ ನಡೆಸಿ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದರು ಕೂಡ ರಾಜ್ಯ ಸರ್ಕಾರ ಇನ್ನೂ ಕೂಡ ವರದಿಯನ್ನು ಅಂಗಿಕರಿಸಿಲ್ಲ ಅದ್ದರಿಂದ ಹಿಂದುಳಿದ ವರ್ಗದ ಜನರಿಗೆ ಮೀಸಲಾತಿಯ ಲಾಭವನ್ನು ಪಡೆಯುವುದಕ್ಕೆ ಸಾಧ್ಯವಾಗದೆ ಇರುವುದರಿಂದ ಮುಖ್ಯಮಂತ್ರಿಗಳು ಸಚಿವ ಸಂಪುಟದಲ್ಲಿ ರಾಜ್ಯದಲ್ಲಿ 2ನೇ ಬಾರಿಗೆ ಜಾತಿ ಸಮೀಕ್ಷೆಗೆ ಮುಂದಾಗಿದ್ದು ಸೆ. 22 ರಿಂದ ಜಾತಿಗಣತಿ ಸೇರಿದಂತೆ ಪ್ರತಿ ಸಮುದಾಯದ ಕುಟುಂಬದ ಶೈಕ್ಷಣಿಕ,ಆರ್ಥಿಕ ಅಂಶಗಳು ಸೇರಿದಂತೆ ಅಗತ್ಯವಿರುವ ಅಂಶಗಳ ಬಗ್ಗೆ ಸಮೀಕ್ಷೆ ನಡೆಸಲಾಗುತ್ತಿದೆ ಪ್ರತಿಯೊಬ್ಬರು ಕೂಡ ತಮ್ಮ ಶಾಲಾ ದಾಖಲಾತಿಗಳಲ್ಲಿರುವಂತೆ ಸಂಪೂರ್ಣವಾದ ಮಾಹಿತಿಯನ್ನು ತಮ್ಮ ಮನೆಗೆ ಗಣತಿಗೆ ಬರುವ ಗಣತಿದಾರರಿಗೆ ನೀಡಬೇಕು. ತಾಲೂಕಿನಲ್ಲಿ ಶೋಷಿತ ,ಹಿಂದುಳಿದ ವರ್ಗದವರು ತಮ್ಮ ಸಂಪೂರ್ಣವಾದ ಅಂಕಿ ಅಂಶಗಳನ್ನು ಗಣತಿದಾರರಿಗೆ ನೀಡಬೇಕು, ಜಿಲ್ಲೆಯ ಎಲ್ಲಾ ಸಮುದಾಯಗಳ ಮುಖಂಡರು ಸಾರ್ವಜನಿಕರಿಗೆ ತಮ್ಮ ಮೂಲ ಜಾತಿಯ ಬಗ್ಗೆ ಬರೆಸುವುದರ ಬಗ್ಗೆ ಮಾಹಿತಿ ನೀಡಬೇಕು.ಸಂವಿಧಾನದ ಮೂಲಕ ದೊರೆಯುವ ಮೀಸಲಾತಿಯ ಲಾಭ ಎಲ್ಲಾ ಸಮುದಾಯಗಳಿಗೂ ದೊರೆಯಬೇಕು . ಗ್ರಾಮೀಣ ಭಾಗದ ಸಣ್ಣ ಸಮುದಾಯಗಳನ್ನು ಸಂಘಟಿಸುವ ಉದ್ದೇಶದಿಂದ ಸಾರ್ವಜನಿಕರಿಗೆ ಕೇಂದ್ರ ಮತ್ತು ರಾಜ್ಯಗಳು ನಡೆಸುವ ಜಾತಿ ಗಣತಿ,ಜನಗಣತಿ, ಹಾಗೂ ಸರ್ಕಾರದ ಮಿಸಲಾತಿಯ ಲಾಭಗಳ ಬಗ್ಗೆ ಮಾಹಿತಿ ನೀಡುವ ಉದ್ದೇಶದಿಂದ ರಾಯಚೂರು ಕೃಷಿ ವಿಜ್ಞಾನಿಗಳ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ಸಂಪನ್ಮೂಲ ವ್ಯಕ್ತಿಗಳಿಂದ ಸೆ. 14 ರಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಗಿದ್ದು ಜಾತಿ ಸಮೀಕ್ಷೆಯ ಮಹಾತ್ವದ ಕುರಿತು ಸಾಮಾಜ ವಿಜ್ಞಾನಿ ಎ.ನಾರಾಯಣ ,ಶೋಷಿತ ಸಮುದಾಯಗಳು ಸಾಗಬೇಕಾದ ಹಾದಿ ಕುರಿತು ಕೆ.ಕೃಷ್ಣಪ್ಪ ಉಪನ್ಯಾಸ ನೀಡಲಿದ್ದಾರೆ. ಅತೀಕ,ಶಿವಣ್ಣ ಸೇರಿದಂತೆ ಇನ್ನಿತರರು ಅಗತ್ಯ ಮಾಹಿತಿ ನೀಡಲಿದ್ದಾರೆ ರಾಯಚೂರು ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿನ ಎಲ್ಲಾ ಸಮುದಾಯಗಳ ಹಿರಿಯರು , ಯುವಕರು, ಮಹಿಳೆಯರು ಕಾರ್ಯಗಾರದಲ್ಲಿ ಭಾಗವಹಿಸಿ ಜಾತಿ ಗಣತಿಯಿಂದಾಗುವ ಪ್ರಯೋಜನೆಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದು ಎಂದು ತಿಳಿಸಿದರು.

ಸಭೆಯಲ್ಲಿ ತಾ.ಹಿಂದುಳಿದ ವರ್ಗಗಳ ಒಕ್ಕೂಟದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಹನುಮಂತಪ್ಪ, ಕೆ. ಬಸವಂತಪ್ಪ, ಹೊನ್ನಪ್ಪ ಹೆಳವರ್, ಬಿ.ಕೆ.ಅಮರೇಶಪ್ಪ, ಕ್ರಾಂತಿಕುಮಾರ್ ಯಾದವ್, ಶ್ರೀನಿವಾಸ ಉಪ್ಪಾರ, ಸುರೇಶ ಶಿಕ್ಷಕರು, ಸಾಲಿನಗೌಡ, ವೈಶ್ರೀಕಾಂತ, ಜಂಬಣ್ಣ, ದಾನಪ್ಪ ಯಾದವ್, ರೇಣುಕಾರೆಡ್ಡಿ, ಸೂರ್ಯನಾರಾಯಣ ಯಾದವ್, ನಾಗೇಶ್ ಕಬ್ಬೇರ್, ವೀರೇಶ ಉದಯ ಟೈಲರ್, ವೆಂಕಟೇಶ ಸೇರಿದಂತೆ ಇನ್ನಿತರರು ಇದ್ದರು.

## ಪದಾಧಿಕಾರಿಗಳ ನೇಮಕ

ತಾ.ಹಿಂದುಳಿದ ವರ್ಗಗಳ ಒಕ್ಕೂಟದ ಎರಡನೇ ಅವಧಿಗೆ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು ತಾ.ಗೌರವಾಧ್ಯಕ್ಷರಾಗಿ ಲಕ್ಷ್ಮೀ ನಾರಾಯಣ ಯಾದವ್, ತಾ.ಅಧ್ಯಕ್ಷರಾಗಿ ಎಂ.ಪ್ರವೀಣ್ ಕುಮಾರ್, ಕಾರ್ಯಧ್ಯಕ್ಷರಾಗಿ ಜಿ.ನಾಗರಾಜ, ಉಪಾಧ್ಯಕ್ಷರಾಗಿ ಯಂಕಣ್ಣ ಯಾದವ್, ಸಿ.ಗಂಗಾಧರ, ಮಂಜುನಾಥಗೌಡ, ಉಪಾಪತಿ.ಜಿ, ವೀರೇಶ ಉಪ್ಪಾರ, ನಾಗರಾಜ ಹರವಿ, ಯಲ್ಲಪ್ಪ ,ಬಸವರಾಜ ಹೂಗಾರ, ಪ್ರಧಾನ ಕಾರ್ಯದರ್ಶಿ ನರಸಿಂಹ ಹೆಳವರ್, ಖಜಾಂಚಿ ಭೀಮರಾಯ ಶೀತಿಮನಿ, ಕಾರ್ಯದರ್ಶಿಯಾಗಿ ಡಿ. ವೀರೇಶ,ಕನಕಪ್ಪ ಯಾದವ್, ಧನುಂಜ ಪತ್ತಾರ, ವಿನೋದ್ ಕುಮಾರ್, ವೈ,ವೀರೇಶರೆಡ್ಡಿ,ಸಂಘಟನಾ ಕಾರ್ಯದರ್ಶಿಯಾಗಿ ತುಳುಜಾರಾಮ್ ಸಿಂಗ್ , ಶಿವುಕುಮಾರ ಚಲ್ಮಲ್, ವಿಜಯಕುಮಾರ್ ಗೌಡ, ಬಾಳಪ್ಪ, ಮೌಲಪ್ಪ ಚೀಕಲಪರ್ವಿ ರವರನ್ನು ಆಯ್ಕೆ ಮಾಡಿ ಅದೇಶ ಪತ್ರಗಳನ್ನು ವಿತರಿಸಲಾಯಿತು.

# ಸೆ.13 ರಂದು ರಾಷ್ಟ್ರೀಯ ಲೋಕ ಅದಾಲತ್: ನ್ಯಾ. ಹೆಚ್.ಎ.ಸಾತ್ವಿಕ್

**ರಾಯಚೂರು,ಸೆ.11–**ವ್ಯಾಜ್ಯ ಪೂರ್ವ ಹಾಗೂ ನ್ಯಾಯಾಲಯಗಳಲ್ಲಿ ಬಾಕಿ ಉಳಿದಿರುವ ಪ್ರಕರಣಗಳನ್ನು ತಕ್ಷಣ ಇತ್ಯರ್ಥಪಡಿಸುವ ಸಲುವಾಗಿ ಇಡೀ ಜಿಲ್ಲೆಗೆ ಸಂಬಂಧಿಸಿದಂತೆ ಸೆ.13 ರಂದು ರಾಷ್ಟ್ರೀಯ ಲೋಕ ಅದಾಲತ್ ಹಮ್ಮಿಕೊಳ್ಳಲಾಗಿದೆ ಎಂದು ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಹೆಚ್.ಎ.ಸಾತ್ವಿಕ್ ಅವರು ತಿಳಿಸಿದ್ದಾರೆ.

ಅಂದು ಬೆಳಿಗ್ಗೆ 10 ಗಂಟೆಗೆ ಜಿಲ್ಲಾ ನ್ಯಾಯಾಲಯದಲ್ಲಿ ಹಾಗೂ ಜಿಲ್ಲೆಯ ಎಲ್ಲಾ ತಾಲ್ಲೂಕು ನ್ಯಾಯಾಲಯಗಳಲ್ಲಿ ರಾಷ್ಟ್ರೀಯ ಲೋಕ ಅದಾಲತ್ ನಿಗದಿಪಡಿಸಲಾಗಿದ್ದು, ಲೋಕ ಅದಾಲತ್‌ನಲ್ಲಿ ನ್ಯಾಯಾಲಯದಲ್ಲಿ ಬಾಕಿ ಇರುವ ಸಿವಿಲ್ ಮತ್ತು ಕ್ರೀಮಿನಲ್ (ರಾಜಿಯಾಗುವಂತಹ) ಮೊಕ್ಕದಮ್ಮೆಗಳನ್ನು, ಅಲ್ಲದೇ ಮೋಟಾರ ವಾಹನ ಕಾಯ್ದೆ, ಕುಟುಂಬ ನ್ಯಾಯಾಲಯದ ಪ್ರಕರಣಗಳು ಮತ್ತು ಎಲ್ಲಾ ಬಗೆಯ ಪ್ರಕರಣಗಳನ್ನು ಲೋಕ ಅದಾಲತ್ ಮುಖಾಂತರ ಇತ್ಯರ್ಥಗೊಳಿಸಲಾಗುವುದು.

ವಕೀಲರು, ಕಕ್ಷಿದಾರರು, ನ್ಯಾಯಾಲಯದಲ್ಲಿ ಬಾಕಿ ಇರುವ ಹಾಗೂ ವ್ಯಾಜ್ಯ ಪೂರ್ವ ಪ್ರಕರಣಗಳನ್ನು ರಾಷ್ಟ್ರೀಯ ಲೋಕ ಅದಾಲತ್ ಮೂಲಕ ಇತ್ಯರ್ಥಪಡಿಸಿಕೊಳ್ಳಲು ಸದಾವಕಾಶವನ್ನು ಒದಗಿಸಲಾಗಿದ್ದು, ಎಲ್ಲಾ ವಕೀಲರು, ಕಕ್ಷಿದಾರರು, ನ್ಯಾಯಾಲಯದಲ್ಲಿ ಬಾಕಿ ಇರುವ ಹಾಗೂ ವ್ಯಾಜ್ಯಪೂರ್ವ ಎಲ್ಲಾ ಬಗೆಯ ಕೇಸುಗಳನ್ನು ಲೋಕ ಅದಾಲತ್ ನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇತ್ಯರ್ಥಪಡಿಸಿಕೊಳ್ಳುವಂತೆ ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹಿರಿಯ ನಾಗರಿಕರಿಗೆ ಸೆ.20ರಂದು ವಿವಿಧ ಕ್ರೀಡಾ, ಸಾಂಸ್ಕೃತಿಕ ಸ್ಪರ್ಧೆಗಳ ಆಯೋಜನೆ

**ರಾಯಚೂರು,ಸೆ.11–**ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯಿಂದ ವಿಶ್ವ ಹಿರಿಯ ನಾಗರಿಕರ ದಿನಾಚರಣೆ–2025ರ ಅಂಗವಾಗಿ ಕ್ರೀಡಾ/ಸಾಂಸ್ಕೃತಿಕ ಸ್ಪರ್ಧೆಗಳನ್ನು ಸೆ.20ರಂದು ಬೆಳಗ್ಗೆ 10.30ಕ್ಕೆ ನಗರದ ಜಿಲ್ಲಾ ಮಹತ್ಮಾಗಾಂಧಿ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಹಿರಿಯ ನಾಗರಿಕರು ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಕೋರಲಾಗಿದೆ.

ಸೆ.20ರಂದು 60ರಿಂದ 70ವರ್ಷದ ಮಹಿಳೆಯರು/ ಪುರುಷರಿಗಾಗಿ ಮ್ಯೂಸಿಕಲ್ ಚೇರ್, 60 ರಿಂದ 69 ವರ್ಷ ಹಾಗೂ 70 ವರ್ಷ ಹಾಗೂ ಮೇಲ್ಪಟ್ಟವರಿಗಾಗಿ ಬಿರುಸಿನ ನಡಿಗೆ ಹಾಗೂ ಬಕೆಟ್‌ನಲ್ಲಿ ಬಾಲ್ ಎಸೆಯುವ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. 60 ರಿಂದ 70 ವರ್ಷದ ಮಹಿಳೆಯರು/ ಪುರುಷರಿಗಾಗಿ ಗಾಯನ ಸ್ಪರ್ಧೆ, 60 ರಿಂದ 69 ವರ್ಷ ಹಾಗೂ 70 ವರ್ಷ ಹಾಗೂ ಮೇಲ್ಪಟ್ಟವರಿಗಾಗಿ ಏಕ ಪಾತ್ರಾಭಿನಯ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದ್ದು, ಜಿಲ್ಲಾ ವ್ಯಾಪ್ತಿಯ ಹಿರಿಯ ನಾಗರಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಎಸ್.ಟಿ.ಅಲೆಮಾರಿ ಮತ್ತು ಅರೆ ಅಲೆಮಾರಿ ಜನಾಂಗಗಳಿಗೆ ವಸತಿ ನೀಡುವ ಭರವಸೆ



**ಬೀದರ್,ಸೆ.11–** ಬೀದರ ಜಿಲ್ಲೆಯ ರಾಜಗೊಂಡ ಸಮುದಾಯದ ಪರಿಶಿಷ್ಟ ಪಂಗಡದ ಅಲೆಮಾರಿ ಮತ್ತು ಅರೆ ಅಲೆಮಾರಿ ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಸಮುದಾಯದ ಜನಾಂಗದವರಿಗೆ ವಸತಿ ನಿಲಯವನ್ನು ಒದಗಿಸುವುದು ಸಂಬಂಧಿ ಭರವಸೆ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅವರು ನೀಡಿದ್ದಾರೆ.

ರಾಜಗೊಂಡ ಆದಿವಾಸಿ ಸಮಾಜ ಅಭಿವೃದ್ಧಿ ಜಿಲ್ಲಾ ಅಧ್ಯಕ್ಷ ಪಿಟಿ ಶಾಮು ಅವರು ಸಾಮಾಜಿಕ ಸಮಸ್ಯೆಯ ವಿಷಯವಾಗಿ ತಮ್ಮ ಸಮಾಜದ ಜನರೊಂದಿಗೆ ಸೇರಿ ಜಿಲ್ಲಾಧಿಕಾರಿಗಳ ಕಚೇರಿಗೆ ತೆರಳಿದರು. ಅವರು ತಿಳಿಸಿದರು, “ನಮ್ಮ 142 ವಸತಿ ರಹಿತ ಕುಟುಂಬಗಳು ಹಳದಕೇರಿ (ಕೆ) ಗ್ರಾಮದ ಸರ್ವೇ ನಂಬರ 51 ಮತ್ತು 52 ರ ಭೂಮಿಯಲ್ಲಿ ನಲವತ್ತು ವರ್ಷಕ್ಕಿಂತ ಹೆಚ್ಚು ಕಾಲ ವಾಸಿಸುತ್ತಿದ್ದಾರೆ. ಕುಟುಂಬಗಳ ಸಂಖ್ಯೆ ಹೆಚ್ಚಾದ ಕಾರಣ ಅನೇಕರಿಗೆ ವಾಸಸ್ಥಳ ಸಮಸ್ಯೆ ಉಂಟಾಗಿದೆ.”

ಸಮಾಜದ ಹಿರಿಯರು ಹಾಗೂ ಮುಖ್ಯಸ್ಥರು ಒಟ್ಟಾಗಿ ಮನವಿ ಸಲ್ಲಿಸಿ, ಜನರ ಕಂಟಕದ ಜಾನುವಾರುಗಳ ನಾಯಿಗಳ ಕಾಟ ಇತ್ಯಾದಿ ಸಮಸ್ಯೆಗಳ ಪರಿಹಾರವಾಗಿ ಖಾಯಮ ನಿವಾಸ ವ್ಯವಸ್ಥೆ ಮಾಡಬೇಕೆಂದು ಸೂಚಿಸಿದರು.

ಸುನಿಲ್ ಸಡಮಕಿ ಅವರು “ಸಮುದಾಯದಲ್ಲಿ ಸುಮಾರು 600 ಜನರ ವಾಸವಿದ್ದು, ರೇಷನ್ ಲಾರ್ಡ್ ಸೌಲಭ್ಯವಿರುವವರು ಕೇವಲ 25 ಜನರು ಮಾತ್ರ. ಆದಕಾರಣ ಇತರರಿಗೆ ಸಹಾಯ ಬೇಕಾಗಿದೆ.” ಎಂದು ಹೇಳಿದರು.

ಪ್ರೇಮ್ ಜಂಕರೆ ಅವರು ವಿಸ್ತಾರವಾಗಿ ಹೇಳಿಕೆಯಾಗಿದ್ದು, “ಬಹಳ ಅಧಿಕಾರಿಗಳು ನಮ್ಮ ಮನವಿಗಳನ್ನು ಗಮನಿಸಿದ್ದರೂ ಸ್ಪಷ್ಟ ಪರಿಹಾರ ದೊರೆಯುತ್ತಿಲ್ಲ. ಸಚಿವರು ಮತ್ತು ಶಾಸಕರು ಭೇಟಿ ನೀಡಿದರೂ ಪರಿಹಾರ ಸಿಗಲಿಲ್ಲ.” ಎಂದು ಪ್ರತ್ಯೇಕವಾಗಿ ಅಭಿಪ್ರಾಯ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಠಾಕೂರ್ ಉಲ್ಕೆ ಕಾರ್ಯದರ್ಶಿ, ಹರೀಶ್ ಬಾಬು ಉಪಾಧ್ಯಕ್ಷರು, ಯುವರಾಜ ಶೇಡಂಕಿ ಸದಸ್ಯರು, ಧರ್ಮದಾಸ ಉಲ್ಕೆ, ವಿಜು ಜಮ್ಕೆ, ಅನು ಜಾಮ್ಕೆ, ವಸಂತ ಉಲ್ಕೆ, ಧನರಾಜ ಮತ್ತು ಇನ್ನೂ ಅನೇಕ ಸಮಾಜದ ಪ್ರಮುಖ ವ್ಯಕ್ತಿಗಳು ಉಪಸ್ಥಿತರಿದ್ದರುಇದೆ ಸಂಧರ್ಬದಲ್ಲಿ ಠಾಕೂರ್ ಉಲ್ಕೆಕಾರ್ಯದರ್ಶಿ,ಹರೀಶ್ ಬಾಬುಉಪಾಧ್ಯಕ್ಷರು, ಯುವರಾಜ ಶೇಡಂಕಿ ಸದಸ್ಯರು, ಧರ್ಮದಾಸ ಉಲ್ಕೆ, ವಿಜು ಜಮ್ಕೆ, ಅನು ಜಾಮ್ಕೆ, ವಸಂತ ಉಲ್ಕೆ, ಧನರಾಜಹಾಗೂ ಮತ್ತು ಇನ್ನೂ ಅನೇಕ ಜನರು ಸಮಾಜದ ಮುಖ್ಯಸ್ಥರು ಅನೇಕರು ಉಪಸ್ಥಿತರಿದ್ದರು

# ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಿ: ಯು.ನಿಸಾರ್ ಅಹಮದ್



ಯುವ ಮಾರ್ಗ ಸುದ್ದಿ

**ರಾಯಚೂರು,ಸೆ.11–**ಅಲ್ಪಸಂಖ್ಯಾತರು ತಮ್ಮ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಬೇಕು ಎಂದು ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷರಾದ ಯು.ನಿಸಾರ್ ಅಹಮದ್ ಅವರು ಹೇಳಿದರು.

ಸೆಪ್ಟೆಂಬರ್ 11ರಂದು ಗುರುವಾರ ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜಿಲ್ಲೆಯ ಅಲ್ಪಸಂಖ್ಯಾತರ ಮುಸ್ಲಿಂ, ಕ್ರೈಸ್ತ, ಜೈನ್, ಬೌದ್ಧರು, ಸಿಖ್ ಮತ್ತು ಪಾರ್ಸಿ ಸಮುದಾಯದ ಮುಖಂಡರೊಂದಿಗೆ ಸಮಾಲೋಚನೆ ಮತ್ತು ಕುಂದು ಕೊರತೆ ಅರ್ಜಿ ಸ್ವೀಕಾರ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ರಾಜ್ಯದಲ್ಲಿನ ಅಲ್ಪಸಂಖ್ಯಾತರ ಮುಸ್ಲಿ ಸಮುದಾಯವರ ಬಹಳಷ್ಟು ಮಕ್ಕಳು ಶಾಲೆಯಿಂದ ಹೊರಗಿದ್ದಾರೆ. ಈ ಬಗ್ಗೆ ಮುಸ್ಲಿಂ ಸಮುದಾಯದ ಮುಖಂಡರು ಯೋಚಿಸಿ, ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸಿ ವಿದ್ಯಾವಂತರನ್ನಾಗಿ ಮಾಡಲು ಶ್ರಮಿಸಬೇಕು.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿ ಅನೇಕ ಶಾಲಾ ಕಾಲೇಜು ಪ್ರಾರಂಭಿಲಾಗಿದ್ದು, ಅವುಗಳ ಸದುಪಯೋಗವಾಗಬೇಕು ಎಂದರು.

ರಾಜ್ಯದಲ್ಲಿ ಶೇ.44 ರಷ್ಟು ಅಲ್ಪಸಂಖ್ಯಾತರ ಮಕ್ಕಳು ಅಕ್ಷರದ ಜ್ಞಾನವಿಲ್ಲದವರು ಇದ್ದಾರೆ. ದೇಶದಲ್ಲಿ ಅಲ್ಪಸಂಖ್ಯಾತರಲ್ಲಿ ಜೈನ್, ಕ್ರಿಶ್ಚಿಯನ್ ಮತ್ತು ಕಡಿಮೆ ಜನಸಂಖ್ಯೆ ಇರುವ ಪಾರ್ಸಿ ಸಮುದಾಯದವರು ಹೆಚ್ಚು ಸುಶಿಕ್ಷಿತರಾಗಿದ್ದಾರೆ. ಮುಸ್ಲಿಂ ಸಮುದಾಯದ ಶೇ.50 ರಷ್ಟು ಮಕ್ಕಳು ಶಾಲೆಗೆ ಹೋಗುತ್ತಿಲ್ಲ. ಶಾಲೆ ಬಿಟ್ಟ ಮಕ್ಕಳ ಸಂಖ್ಯೆ ಹೆಚ್ಚಾಗುತ್ತಿದೆ. ಶೇ.10 ರಷ್ಟು ಮಾತ್ರ ಎಸ್‌ಎಸ್‌ಎಲ್‌ಸಿ ಓದುತ್ತಿದ್ದಾರೆ. ಶೇಕಡಾ 2.7 ಮಾತ್ರ ಪದವೀಧರರಿದ್ದಾರೆ. ಐಎಎಸ್, ಐಪಿಎಸ್ ಮಾಡುವವರ ಸಂಖ್ಯೆಯಂತೂ ತೀರಾ ಕಮ್ಮಿ ಇದೆ.

ಮುಸ್ಲಿಮರು ತಮ್ಮ ತಮ್ಮ ಬಡಾವಣೆಗಳಲ್ಲಿ ಶಿಕ್ಷಣದಿಂದ ವಂಚಿತರಾದವರನ್ನು ಸಮೀಕ್ಷೆ ನಡೆಸಿ ಅವರಿಗೆ ಶಿಕ್ಷಣ ಕೊಡಲು ಮುಂದಾಗಬೇಕು ಎಂದು ಸಲಹೆ ಮಾಡಿದರು.

ಪ್ರತಿಯೊಂದು ಮಗುವೂ ಕಡ್ಡಾಯ ಶಿಕ್ಷಣ ಪಡೆಯಬೇಕು ಶಿಕ್ಷಣಕ್ಕಾಗಿ ಸರ್ಕಾರಗಳು ಕೋಟ್ಯಾಂತರ ರೂ. ಅನುದಾನ ನೀಡುತ್ತವೆ. ಇದು ಸದ್ಬಳಕೆ ಆಗಬೇಕು. ಯಾವುದೇ ಮಗು ಶಿಕ್ಷಣದಿಂದ ವಂಚಿತರಾಗಬಾರದು. ಬಡ ಮಕ್ಕಳಿದ್ದರೆ ಅವರಿಗೆ ಸರ್ಕಾರಿ ಶಾಲೆಗೆ ಸೇರಿಸಬೇಕು. ಈಗ

ಅಂಗನವಾಡಿಯಿಂದ ಉನ್ನತ ಶಿಕ್ಷಣದವರೆಗೆ ಉಚಿತ ಶಿಕ್ಷಣ ಸಿಗುತ್ತಿದ್ದು, ಅದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು. ಶೈಕ್ಷಣಿಕ ಸೌಲಭ್ಯಗಳನ್ನು ಅಲ್ಪಸಂಖ್ಯಾತರು ಹೆಚ್ಚು ಬಳಸಿಕೊಳ್ಳುತ್ತಿಲ್ಲ ಎನ್ನುವುದು ಕಳವಳಕಾರಿ ಸಂಗತಿ ಎಂದರು.

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
9743497111 9743496111

# ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷರಿಂದ ಚರ್ಚ್ ಕಾಮಗಾರಿ ಪರಿಶೀಲನೆ



ಯುವ ಮಾರ್ಗ ಸುದ್ದಿ

**ರಾಯಚೂರು,ಸೆ.11–**ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷರಾದ ಯು.ನಿಸಾರ್ ಅಹಮದ್ ಅವರು ರಾಯಚೂರ ಜಿಲ್ಲಾ ಪ್ರವಾಸದ ವೇಳೆಯಲ್ಲಿ ನಗರದ ರೈಲ್ವೆ ನಿಲ್ದಾಣದ ಪಕ್ಕದಲ್ಲಿರುವ ಮೆಥೋಡಿಸ್ಟ್ ಚರ್ಚಗೆ ಸೆಪ್ಟೆಂಬರ್ 11ರಂದು ಭೇಟಿ ನೀಡಿ ಕಾಮಗಾರಿ ವೀಕ್ಷಣೆ ಮಾಡಿದರು.

ಈ ವೇಳೆ ಮಾತನಾಡಿದ ಅವರು 50 ಲಕ್ಷ ರೂ.ಗಳ ಅನುದಾನದಲ್ಲಿ ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಹಾಗೂ ಗುಣಮಟ್ಟದಿಂದ ಪೂರ್ಣಗೊಳಿಸಬೇಕೆಂದು ಸ್ಥಳದಲ್ಲಿದ್ದ ಅಧಿಕಾರಿಗಳಿಗೆ ಸೂಚಿಸಿದರು.

ರಾಯಚೂರು ತಾಲೂಕಿನ, ಉಡಮಗಾಲ ಖಾನಾಪೂರ ಗ್ರಾಮದ ಯೆಹೋವನ ಯುವಕ ಮಂಡಳಿ ಚರ್ಚ್ ದುರಸ್ತಿ ಮತ್ತು ನವೀಕರಣಕ್ಕಾಗಿ ಸಹಾಯಾನುದಾನ ಮಂಜೂರು ಮಾಡಬೇಕು. ಹಾಗೂ ತಾಲೂಕಿನ ತುಂಗಭದ್ರ ಕ್ಯಾಂಪ್ ಮೆಥೋಡಿಸ್ಟ್ ಚರ್ಚ್ ಕಾಂಪೌಂಡ್ ನಿರ್ಮಾಣಕ್ಕೆ ಅನುದಾನ ಬಿಡುಗಡೆಗೆ ಮಾಡುವಂತೆ ಈ ವೇಳೆ ಕ್ರೈಸ್ತ ಧರ್ಮದ ಮುಖಂಡರು ಮನವಿ ಮಾಡಿದರು.

Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: ANILKUMAR H